

# ಕರ್ನಾಟಕದ ಪ್ರಮುಖ ಜೈನಕ್ಷೇತ್ರಗಳು

ಡಾ. ಕೆ. ಅನಂತರಾಮು

ಜೈನಧರ್ಮದ 'ಬದರಿ' ಮತ್ತು 'ಕಾಶಿ'ಗಳು ಇರುವುದು ಕರ್ನಾಟಕದಲ್ಲಿಯೇ. ಜೈನಧರ್ಮೀಯರ ಅತ್ಯಂತ ಪ್ರಾಚೀನ ಮತ್ತು ಸುಭಗ ಮನೋಹರ ಶಿಲ್ಪಕಲೆಯ ಸೊಬಗು ಕಂಡುಬರುವುದು ಕೂಡ ಇಲ್ಲಿಯೇ. ಇದರ ವಿವರಣೆಯನ್ನು ವಿಸ್ತಾರವಾಗಿ, ಮನಮುಟ್ಟುವಂತೆ ಮಾಡಿಕೊಟ್ಟಿರುವ ಶ್ರೀಯುತರು ಕನ್ನಡದ ಪ್ರಸಿದ್ಧ ಸಾಹಿತಿಗಳು: ಮನೋಜ್ಞ ವಾಗ್ಮಿಗಳು: ನಿವೃತ್ತ ಕನ್ನಡ ಪ್ರಾಧ್ಯಾಪಕರು: ಆಶ್ರಮದ ನಿಕಟ ಭಕ್ತರು ಮತ್ತು ಉತ್ತಮ ಸಹೃದಯರು.


ಗೊಮ್ಮಟೇಶ್ವರ ಸ್ವಾಮಿ

**ದಿಗಂಬರ ಜೈನಧರ್ಮ:** ಅಂತಿಮ ಶ್ರುತಕೇವಲಿಯೆನಿಸಿದ ಭದ್ರಬಾಹು ಮುನಿವರನ ಮೂಲಕ ಕ್ರಿ.ಪೂ. ಸುಮಾರು ೩೦೦ರಲ್ಲಿ ದಿಗಂಬರ ಜೈನಧರ್ಮವು ಕರ್ನಾಟಕವನ್ನು ಪ್ರವೇಶಿಸಿತೆಂದು ತಿಳಿಯಲಾಗಿದೆ. ಉತ್ತರಭಾರತದಲ್ಲಿ ಹನ್ನೆರಡು ವರ್ಷಗಳ ದೀರ್ಘ ಬರಗಾಲ ಬೀಳುತ್ತದೆಯೆಂಬುದನ್ನು ಅರಿತು ಭದ್ರಬಾಹುವು ತನ್ನ ಶಿಷ್ಯನಾದ ಚಂದ್ರಗುಪ್ತನೆಂಬ ದೊರೆಯನ್ನೂ ಮುನಿಸಂಘವನ್ನೂ ಜೊತೆ ಮಾಡಿಕೊಂಡು ದಕ್ಷಿಣ ಭಾರತಕ್ಕೆ ಬಂದನು. ಇಂದಿನ ಶ್ರವಣಬೆಳಗೊಳಕ್ಕೆ ಬಂದಾಗ ತನಗೆ ಅವಸಾನಕಾಲ ಪ್ರಾಪ್ತವಾಗಲಿದೆಯೆಂಬುದನ್ನು ದಿವ್ಯದೃಷ್ಟಿಯಿಂದ ಅರಿತು, ಚಂದ್ರಗುಪ್ತನೊಡನೆ ಅಲ್ಲಿಯೇ ಉಳಿದು, ಮುನಿಸಂಘವನ್ನು ದ್ರಾವಿಡದೇಶಕ್ಕೆ ಕಳುಹಿಸಿಕೊಟ್ಟನೆಂದು ಐತಿಹ್ಯವಿದೆ. ಜೈನಧರ್ಮದಲ್ಲಿ ಪ್ರಮುಖವಾಗಿ **ದಿಗಂಬರ** ಮತ್ತು **ಶ್ವೇತಾಂಬರ** ಎಂಬೆರಡು ಪಂಥಗಳಿದ್ದು, ಕರ್ನಾಟಕದಲ್ಲಿ ಎಲ್ಲ ಕಾಲದಿಂದಲೂ ದಿಗಂಬರ ಪಂಥವೇ ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಂಡಿದೆ. ಈ ಹೊಸ ಯುಗದಲ್ಲಿ ಉತ್ತರಭಾರತದಿಂದ ಸಾಕಷ್ಟು ಸಂಖ್ಯೆಯಲ್ಲಿ ಶ್ವೇತಾಂಬರಪಂಥೀಯರು ವಲಸೆ ಬಂದು ನೆಲೆಸಿದ್ದಾರಾದರೂ ದಿಗಂಬರಪಂಥವೇ ಇಂದಿಗೂ ತನ್ನ ಪ್ರಾಚುರ್ಯವನ್ನು ಸಂರಕ್ಷಿಸಿಕೊಂಡಿದೆ. ಕೊಪ್ಪಳ ಮತ್ತು ಹಾಸನ ಜಿಲ್ಲೆಯ ಶ್ರವಣಬೆಳಗೊಳಗಳು ಆರಂಭಕಾಲದ ಜೈನಕ್ಷೇತ್ರಗಳಾಗಿದ್ದುವು. ಆ ಕ್ಷೇತ್ರಗಳಲ್ಲಿ ೭ ನೆಯ ಶತಮಾನಕ್ಕೆ ಸೇರುವ ಜೈನಶಾಸನಗಳು ಲಭ್ಯವಾಗಿ ಆ ಪ್ರಾಚೀನತೆಯನ್ನು ಎತ್ತಿಹಿಡಿದಿವೆ. ಕನ್ನಡನಾಡನ್ನು ಕಾಲಕಾಲಕ್ಕೆ ಆಳಿದ ದೊರೆಗಳೆಲ್ಲ ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿ, ಅದರ ಸರ್ವತೋಮುಖ ಬೆಳೆವಣಿಗೆಗೆ ಕಾರಣರಾಗಿದ್ದಾರೆ. ಬನವಾಸಿಯ ಕದಂಬರು, ಗಂಗರು, ಬಾದಾಮಿಯ ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಹೊಯ್ಸಳರು ಎಂಬಂತೆ ಎಲ್ಲ ರಾಜಮನೆತನಗಳಿಂದಲೂ ಜೈನಧರ್ಮವು ಪೋಷಣೆಗೆ ಪಾತ್ರವಾಗಿದೆ. ಅದಕ್ಕೆ ಪ್ರತಿಯಾಗಿ ಜೈನಧರ್ಮವು ವಾಸ್ತುಶಿಲ್ಪ ಮತ್ತು ಸಾಹಿತ್ಯರಂಗಗಳಲ್ಲಿ ಅಮೂಲ್ಯವಾದ ಕೊಡುಗೆಗಳನ್ನು ನೀಡಿ, ಭಾರತೀಯ ಸಂಸ್ಕೃತಿಯ ಸಂವರ್ಧನೆಯಲ್ಲಿ ಪ್ರಮುಖಪಾತ್ರ ವಹಿಸಿದೆ. ೧೩ ನೆಯ ಶತಮಾನದವರೆಗೆ ತನ್ನ ಔನ್ನತ್ಯವನ್ನು ಮೆರೆದ ಆ ಧರ್ಮವು, ಈ ನಾಡಿನಲ್ಲಿ ಕಾಲನ ಹೊಡೆತಕ್ಕೆ ಕ್ರಮಕ್ರಮವಾಗಿ ತುತ್ತಾಗಿ ಹಿಂದುಹಿಂದಕ್ಕೆ ಸರಿಯಿತು. ಜೈನತತ್ವಗಳಿಗೆಂದಿಗೂ ಚ್ಯುತಿಯಿಲ್ಲವಾದರೂ ಅದನ್ನು ಅವಲಂಬಿಸಿದ್ದ ಪ್ರಜಾಕೋಟಿ ಕ್ಷೀಣಿಸತೊಡಗಿತು. ಜೈನಧರ್ಮವು ವಾಸ್ತುಶಿಲ್ಪಕ್ಕೆ ನೀಡಿದ ಕೊಡುಗೆಗಳ ಹಿನ್ನೆಲೆಯಲ್ಲಿ ಕನ್ನಡನಾಡಿನ ಕೆಲವು ಪ್ರಮುಖ ಜೈನಕ್ಷೇತ್ರಗಳ ಪರಿಚಯ ಮಾಡಿಕೊಡುವುದು ಈ ಲೇಖನದ ಉದ್ದೇಶವಾಗಿದೆ.



ಇಂದ್ರಗಿರಿ, ಪುಷ್ಕರಣಿ

**ಭುವನಾಭಿರಾಮ ಗೊಮ್ಮಟಮೂರ್ತಿ:** ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿಗೆ ಸೇರುವ ಶ್ರವಣಬೆಳಗೊಳವು ಕರ್ನಾಟಕಕ್ಕೆ ಮಾತ್ರವಲ್ಲದೆ ಭರತ ಖಂಡಕ್ಕೇ ಕಿರೀಟಪ್ರಾಯವಾದ ಜೈನ ತೀರ್ಥವಾಗಿದೆ. ಜಿಜ್ಞಾಸುಗಳು ಅದನ್ನು 'ಜೈನಬದರಿ' ಎಂದು ಕೊಂಡಾಡಿದ್ದಾರೆ. ದೊಡ್ಡಬೆಟ್ಟ (ಇಂದ್ರಗಿರಿ) ಮತ್ತು ಚಿಕ್ಕಬೆಟ್ಟ (ಚಂದ್ರಗಿರಿ) ಎಂದು ಕರೆಯುವ ಎರಡು ಬೆಟ್ಟಗಳ ತಪ್ಪಲಿನಲ್ಲಿ ಶ್ರವಣಬೆಳಗೊಳವು ಹಬ್ಬಿಕೊಂಡಿದೆ. ದೊಡ್ಡಬೆಟ್ಟದ ಮೇಲೆ ಗೊಮ್ಮಟೇಶ್ವರ ಎಂದು ಪ್ರಖ್ಯಾತವಾಗಿರುವ ಬಾಹುಬಲಿ ಸ್ವಾಮಿಯ ಏಕಶಿಲಾವಿಗ್ರಹವಿದೆ. ಆ ಮೂರ್ತಿಯ ಎತ್ತರ ೫೮ ಅಡಿಗಳು. ಅದು ಹೆಬ್ಬಂಡೆಯನ್ನು ಕಡೆದ ಬಳಿಕ ಎತ್ತಿನಿಲ್ಲಿಸಿರುವ ಬಿಂಬವಲ್ಲ, ಬೆಟ್ಟದ ಶಿಖರವನ್ನೇ ಮೂರ್ತಿಯಾಗುವಂತೆ ಕಡೆದು ಮೂಡಿಸಿರುವ ಶಿಲಾಕಲಾವೈಭವ. ಇದನ್ನು ಎಷ್ಟು ಕೊಂಡಾಡಿದರೂ ಸಾಕಾಗುವುದಿಲ್ಲ. ಇದು ವಿಶ್ವದಲ್ಲಿಯೇ ಅತ್ಯಂತ ಎತ್ತರವಾದ ಏಕಶಿಲಾವಿಗ್ರಹವೆಂಬ ಖ್ಯಾತಿಗೆ ಪಾತ್ರವಾಗಿದೆ. ಪ್ರಮಾಣಬದ್ಧವಾದ ಅಂಗಾಂಗಳಿಂದಲೂ, ಶಾಂತ ಗಂಭೀರವಾದ ಮುಖಮಂಡಲದಿಂದಲೂ ಬೆಳಗುತ್ತಿರುವ ಆ ದಿವ್ಯಮಂಗಳಮೂರ್ತಿಯ ಸೌಂದರ್ಯ ಕೂಡ, ಆ ಉತ್ತುಂಗವೈಭವಕ್ಕೆ ಸರಿಸಾಟಿಯಾಗಿದೆ. ಗಂಗಸಾಮ್ರಾಜ್ಯದ ಮಂತ್ರಿಯೂ ಸೇನಾನಾಯಕನೂ ಸಾಹಿತಿಯೂ ಆಗಿದ್ದ **ಚಾವುಂಡರಾಯ**ನೆಂಬಾತನು ಕ್ರಿ.ಶ. ೯೮೩ ರಲ್ಲಿ ಆ ಭುವನಾಭಿರಾಮವಾದ ಮೂರ್ತಿಯನ್ನು ಮಾಡಿಸಿ, ದಿಗಂತವಿಶ್ರಾಂತವಾದ ಕೀರ್ತಿಗೆ ಪಾತ್ರನಾಗಿದ್ದಾನೆ. ಹನ್ನೆರಡು ವರ್ಷಗಳಿಗೊಮ್ಮೆ ಆ ನಯನಾಭಿರಾಮವಾದ ಮೂರ್ತಿಗೆ 'ಮಹಾಮಸ್ತಕಾಭಿಷೇಕ' ಎಂಬ ದೊಡ್ಡ ಪರ್ವವೊಂದು ನಡೆಯುತ್ತದೆ. ಮಳೆಗಾಲದಲ್ಲಿ ದೇವೇಂದ್ರನು ಆ ಪುಣ್ಯಮೂರ್ತಿಗೆ ತಾನೇ ಮಸ್ತಕಾಭಿಷೇಕವನ್ನು ನೆರವೇರಿಸುತ್ತಾನಾದರೂ, ಮಹಾಮಸ್ತಕಾಭಿಷೇಕವನ್ನು ವೀಕ್ಷಿಸಲು ಭರತಖಂಡದ ನಾನಾಭಾಗಗಳಿಂದ ಲಕ್ಷಾಂತರ ಜಿನಭಕ್ತರು ಶ್ರವಣಬೆಳಗೊಳಕ್ಕೆ ಆಗಮಿಸುತ್ತಾರೆ.

**ಕಟವಪ್ರಗಿರಿ: ಕಳ್ವಪ್ಪು: ಬೆಳ್ಗೊಳ:** ಗೊಮಟೇಶ್ವರನ ನಿರ್ಮಾಣಕ್ಕೆ ಪೂರ್ವದಿಂದಲೂ ಶ್ರವಣಬೆಳಗೊಳವು ಪ್ರಸಿದ್ಧಿ ಪಡೆದ ಜೈನ ತೀರ್ಥವಾಗಿತ್ತು. ೬–೭ನೆಯ ಶತಮಾನದ ಶಾಸನಗಳಲ್ಲಿ ಅದು **ಕಟವಪ್ರಗಿರಿ, ಕಳ್ವಪ್ಪು, ಬೆಳ್ಗೊಳ** ಎಂದು ಕರೆಯಲ್ಪಟ್ಟಿದೆ. ಜೈನಮುನಿಗಳು ತಮ್ಮ ಅಂತ್ಯಕಾಲದಲ್ಲಿ ಅಲ್ಲಿಗೆ ಹೋಗಿ, ಉಪವಾಸವ್ರತವನ್ನು ಸ್ವೀಕರಿಸಿ, ಸಮಾಧಿಮರಣವೆಂಬ ಶಾಸ್ತ್ರಸಮ್ಮತವಾದ ಬಿಡುಗಡೆಯನ್ನು ಪಡೆದುಕೊಳ್ಳುತ್ತಿದ್ದರು. ಸಮಾಧಿಮರಣವನ್ನು ಹೊಂದಲು ಯೋಗ್ಯವಾದ ಬೆಟ್ಟ ಎಂಬುದು **ಕಟವಪ್ರಗಿರಿ** ಎಂಬ ಸಂಸ್ಕೃತ ಶಬ್ದಕ್ಕಿರುವ ಅರ್ಥ ಎಂದು ವಿದ್ವಾಂಸರು ಸೂಚಿಸಿದ್ದಾರೆ. ಕಳ್ವಪ್ಪು ಎಂಬುದು ಕಟವಪ್ರಗಿರಿಯ ತದ್ಭವರೂಪವೆಂದು ಭಾವಿಸಬಹುದಾಗಿದೆ. ತರುವಾಯದ ಕಾಲದಲ್ಲಿ ಅದು ಶ್ರವಣಬೆಳಗೊಳ ಎಂದು ಕರೆಯಲ್ಪಟ್ಟಿತು. ಶ್ರವಣ ಎಂದರೆ ಜೈನಮುನಿ ಎಂದರ್ಥ. ಊರಿನ ಮಧ್ಯದಲ್ಲಿ ವಿಶಾಲವಾದ ಪುಷ್ಕರಿಣಿಯೊಂದಿದ್ದು, ಸೂರ್ಯರಶ್ಮಿಗೆ ಆ ಕೊಳವು ಬೆಳ್ಳಗೆ ಹೊಳೆಯುತ್ತದೆ. ಆದ್ದರಿಂದ ಅದನ್ನೂ, ಅದರ ವಲಯದಲ್ಲಿರುವ ಊರನ್ನೂ **ಬೆಳ್ಗೊಳ** (ಬೆಳಗೊಳ=ಬಿಳಿಯ ಕೊಳ) ಎಂದು ನಿರ್ದೇಶಿಸಿರಬೇಕು. ಬೆಳ್ಗೊಳವೊಂದು ರಂಜಿಸುವ ಶ್ರವಣರ ಪುಣ್ಯಕ್ಷೇತ್ರ ಎಂಬರ್ಥದಲ್ಲಿ ಅದು ಶ್ರವಣಬೆಳ್ಗೊಳವೆಂದು ರೂಢಿಗೆ ಬಂದಿರಬೇಕು. ವಿಶಾಲವಾದ ಅರ್ಥದಲ್ಲಿ ಶ್ರವಣ ಎಂಬ ಶಬ್ದವು ಗೊಮ್ಮಟನಿಗೂ ಒಪ್ಪುತ್ತದೆ. **ಗೊಮ್ಮಟ** ಎಂದರೆ ಸುಂದರ ಎಂದರ್ಥ.

**ಜಿನಾಲಯಗಳ ಬೀಡು:** ಜೈನಧರ್ಮದಲ್ಲಿ 'ತೀರ್ಥಂಕರರು' ಎಂದು ಕರೆಯಲಾಗುವ, ಪೂಜಾರ್ಹರಾದ, ೨೪ ಮಂದಿ ದೇವತಾಪುರುಷರಿದ್ದಾರೆ. ಪುರಾಣಪುರುಷನಾದ ಆದಿನಾಥ ಸ್ವಾಮಿಯು ಪ್ರಥಮ ತೀರ್ಥಂಕರನಾದರೆ, ಇತಿಹಾಸ ಪುರುಷನಾದ ಮಹಾವೀರಸ್ವಾಮಿಯು ಅಂತಿಮ ತೀರ್ಥಂಕರನಾಗಿದ್ದಾನೆ. ಒಬ್ಬೊಬ್ಬ ತೀರ್ಥಂಕರನ ಆಸರೆಯಲ್ಲಿಯೂ ಯಕ್ಷ ಮತ್ತು ಯಕ್ಷಿ ಎಂಬ ದಂಪತಿ ದೇವತೆಗಳೂ ಇದ್ದಾರೆ. ಅವರು 'ಶಾಸನದೇವತೆಗಳು' ಎಂಬುದಾಗಿಯೂ ಕರೆಸಿಕೊಂಡು, ಭಕ್ತರಿಂದ ವೈಭವಪೂರ್ಣವಾದ ಪೂಜೆಗಳನ್ನು ಸ್ವೀಕರಿಸುತ್ತಾರೆ. ತೀರ್ಥಂಕರರಿಗಾಗಲಿ, ಶಾಸನದೇವತೆಗಳಿಗಾಗಲಿ, 'ಬಸದಿ' ಎಂದು ಹೇಳುವ ಜಿನಮಂದಿರಗಳನ್ನು ನಿರ್ಮಿಸಿ ಪೂಜಿಸುವ ಕ್ರಮ ಬಹಳ ಕಾಲದಿಂದಲೂ ರೂಢಿಗೆ ಬಂದಿದೆ. ಶ್ರವಣಬೆಳಗೊಳವಾದರೋ ಶಿಲ್ಪಕಲಾ ಸೌಂದರ್ಯದಿಂದ ಮೆರೆಯುವ ಹತ್ತಾರು ಬಸದಿಗಳನ್ನು ತನ್ನ ಮಡಿಲಿನಲ್ಲಿ ತುಂಬಿಕೊಂಡಿದೆ. ದೊಡ್ಡಬೆಟ್ಟದಲ್ಲಿ ಗೊಮ್ಮಟ




ಮೂರ್ತಿಯಲ್ಲದೆ ಚೌವೀಸ ತೀರ್ಥಂಕರ ಬಸದಿ (೧೬೪೮ ನೇ ಇಸವಿ) ಚೆನ್ನಣ್ಣನ ಬಸದಿ (೧೬೭೩ ನೇ ಇಸವಿ), ಒದೆಗಲ್ ಬಸದಿ ಮತ್ತು ಸಿದ್ಧರ ಬಸದಿ ಎಂಬ ಆಲಯಗಳಿವೆ. ಚೌವೀಸ ಎಂದರೆ ೨೪ ಎಂದರ್ಥ. ಚೌವೀಸ ತೀರ್ಥಂಕರ ಬಸದಿಯಲ್ಲಿ ಇಪ್ಪತ್ತನಾಲ್ಕು ತೀರ್ಥಂಕರರನ್ನು ಒಂದೇ ಶಿಲೆಯ ಮೇಲೆ ಚಿಕ್ಕದಾಗಿ ಕಡೆದು ಪೂಜಿಸಲಾಗುತ್ತಿದೆ. ಚೆನ್ನಣ್ಣನ ಬಸದಿಯಲ್ಲಿ ೮ ನೆಯ ತೀರ್ಥಂಕರನಾದ ಚಂದ್ರನಾಥ ಸ್ವಾಮಿಯು ಪೂಜೆ ಗೊಳ್ಳುತ್ತಿದ್ದಾನೆ. ಒದೆಗಲ್ ಬಸದಿಯು ತ್ರಿಕೂಟವಾಗಿದ್ದು, ಅಲ್ಲಿ ಮೂರುಮುಖಗಳಿವೆ; ಮೂರು ಗುಡಿಗಳಿವೆ. ಅವುಗಳಲ್ಲಿ ಆದಿನಾಥಸ್ವಾಮಿ, ನೇಮಿನಾಥಸ್ವಾಮಿ (೨೨ನೆಯ ತೀರ್ಥಂಕರ) ಮತ್ತು ಶಾಂತಿನಾಥಸ್ವಾಮಿಯರು (೧೬ನೆಯ ತೀರ್ಥಂಕರ) ನೆಲೆ ಯಾಗಿದ್ದಾರೆ. ಆ ಬಸದಿಯ ಹೊರಗೋಡೆಗೆ ಶಿಲಾಸ್ತಂಭಗಳನ್ನು ರಕ್ಷಣೆಗಾಗಿ ಒದೆಗಲ್ಲಾಗಿ ಕೊಟ್ಟಿರುವುದರಿಂದ ಆ ಹೆಸರು ಬಂದಿದೆ. ಆ ಬಸದಿಯ ಶಿಲ್ಪಕಲಾವೈಭವವೂ ಮೆಚ್ಚುವಂತಿದೆ. ಸಿದ್ಧರ ಬಸದಿ ಎಂದು ಕರೆಯುವ ಆಲಯದಲ್ಲಿ ಜೈನಪುಣ್ಯಪುರುಷರ ಪಂಕ್ತಿಗೆ ಸೇರುವ ಸಿದ್ಧರೊಬ್ಬರ ಮೂರ್ತಿಯಿದೆ. ಈ ಬಸದಿಗಳು ಮಾತ್ರವಲ್ಲದೆ ಅಖಂಡಬಾಗಿಲು, ಸಿದ್ಧರಗುಂಡು, ಗುಳ್ಳಕಾಯಜ್ಜಿ ಬಾಗಿಲು, ತ್ಯಾಗದ ಬ್ರಹ್ಮದೇವರ ಕಂಬ ಎಂಬ ಕಲಾಪೂರ್ಣವಾದ ರಚನೆಗಳೂ ಅಲ್ಲಿವೆ.

**ಚಿಕ್ಕಬೆಟ್ಟವೂ ಬಸದಿಗಳಿಂದ ಇಡಿಕಿರಿದಿದೆ :** ಚಿಕ್ಕಬೆಟ್ಟದಲ್ಲಿ ವಿವಿಧ ಗಾತ್ರ ಪಾತ್ರಗಳ ಹನ್ನೊಂದು ಬಸದಿಗಳಿವೆ. ಚಾವುಂಡರಾಯ ಬಸದಿಯಲ್ಲಿ (೯೮೨ ನೇ ಇಸವಿ) ನೇಮಿನಾಥನ (೨೨ ನೇ ತೀರ್ಥಂಕರ) ಸನ್ನಿಧಾನವಿದೆ. ಅದು ತುಂಬಾ ಕಲಾತ್ಮಕವಾಗಿದೆ. ಚಾವುಂಡರಾಯನ ಮಗ ಜಿನದೇವನು ಅದಕ್ಕೊಂದು ಉಪ್ಪರಿಗೆಯನ್ನು ಕಟ್ಟಿಸಿ, ಅಲ್ಲಿ ಪಾರ್ಶ್ವನಾಥಸ್ವಾಮಿಯನ್ನು (೨೩ ನೇ ತೀರ್ಥಂಕರ) ಪ್ರತಿಷ್ಠಾಪಿಸಿದ್ದಾನೆ. ಶಾಂತಿನಾಥ ಬಸದಿಯಲ್ಲಿ ಶಾಂತಿನಾಥಸ್ವಾಮಿಯು (೧೬ ನೇ ತೀರ್ಥಂಕರ) ಪೂಜೆಗೊಳ್ಳುತ್ತಿದ್ದಾನೆ. ಅಲ್ಲಿ ಒಂದು ಕಾಲಕ್ಕೆ ಭಿತ್ತಿಚಿತ್ರಗಳೂ ಇದ್ದು ಈಗ ಎಲ್ಲವೂ ಅಳಿಸಿಹೋಗಿವೆ. ಚಂದ್ರಗುಪ್ತಬಸದಿಯು ಪಾರ್ಶ್ವನಾಥಸ್ವಾಮಿಯ ನೆಲೆಯಾಗಿದೆ. ಆ ಬಸದಿಯೂ ಗಾತ್ರದಲ್ಲಿ ಚಿಕ್ಕದಾದರೂ ಐತಿಹಾಸಿಕವಾಗಿ ಮಹತ್ವ ಪಡೆದುಕೊಂಡಿದೆ. ಭದ್ರಬಾಹುಗಳೆಂಬ ಮುನಿಗಳು ಚಂದ್ರಗುಪ್ತ ಮೌರ್ಯನೊಡನೆ ದಕ್ಷಿಣಕ್ಕೆ ಒಂದು ಶ್ರವಣಬೆಳಗೊಳದಲ್ಲಿ ನೆಲೆಯಾದ ಐತಿಹ್ಯವನ್ನು ಸಾರುವ ಉಬ್ಬುಶಿಲ್ಪಗಳು ಅಲ್ಲಿವೆ. ಪಾರ್ಶ್ವನಾಥಬಸದಿಯಲ್ಲಿ ಪೂಜೆಗೊಳ್ಳುತ್ತಿರುವ ಪಾರ್ಶ್ವನಾಥಸ್ವಾಮಿಯು ಏಳುಹೆಡೆಯ ಸರ್ಪನ ಕಿರೀಟದಿಂದ ಕೂಡಿ, ಹದಿನೈದು ಅಡಿ ಎತ್ತರವಿದ್ದು ಅತ್ಯಂತ ಮನೋಹರನಾಗಿದ್ದಾನೆ. ಸೂರ್ಯರಶ್ಮಿಯ ಪ್ರವೇಶಕ್ಕೆ ಹೆಚ್ಚು ಅಸ್ಪದವಿಲ್ಲದಿರುವುದರಿಂದ ಕತ್ತಲೆಬಸದಿ (೧೧೧೮ ನೇ ಇಸವಿ) ಹಾಗೆ ಕರೆಸಿಕೊಂಡಿದೆ. ಅದು ಆದಿನಾಥಸ್ವಾಮಿಯ ನೆಲೆಯಾಗಿದೆ. ಅಲ್ಲಿಯೇ ಪ್ರತ್ಯೇಕವಾಗಿ ಪಾರ್ಶ್ವನಾಥಸ್ವಾಮಿಯ ಯಕ್ಷಿಯಾದ ಪದ್ಮಾವತಿ ದೇವಿಯೂ ಇದ್ದಾಳೆ. ಶಾಸನಬಸದಿ ಮತ್ತು ಎರಡು ಕಟ್ಟೆಬಸದಿಗಳೂ ಆದಿನಾಥನ ಸನ್ನಿಧಾನಗಳೇ ಆಗಿವೆ. ಚಂದ್ರಪ್ರಭ ಬಸದಿಯಲ್ಲಿ (೮೦೦ ನೇ ಇಸವಿ) ಪದ್ಮಾಸನಸ್ಥನಾದ ಅಷ್ಟಮ ತೀರ್ಥಂಕರ ಚಂದ್ರಪ್ರಭಸ್ವಾಮಿಯಿದ್ದಾನೆ. ಮಜ್ಜಿಗಣ್ಣನ ಬಸದಿಯು ಅನಂತನಾಥನಿಗೆ (೧೪ ನೇ ತೀರ್ಥಂಕರ) ಮೀಸಲಾಗಿದೆ. ಸವತಿ ಗಂಧವಾರಣ ಬಸದಿಯು ಹೊಯ್ಸಳ ದೊರೆ ವಿಷ್ಣುವರ್ಧನನ ಮಡದಿ ಶಾಂತಲೆಯಿಂದ ನಿರ್ಮಾಣಗೊಂಡು ಶಾಂತಿನಾಥಸ್ವಾಮಿಗೆ ಸಮರ್ಪಿತವಾಗಿದೆ.

ತೇರಿನ ಬಸದಿಯಲ್ಲಿ (೧೧೧೭ ನೇ ಇಸವಿ) ಐದು ಅಡಿ ಎತ್ತರದ ಗೊಮ್ಮಟೇಶ್ವರನಿದ್ದಾನೆ. ಭದ್ರಬಾಹುಗಳು ತಪಸ್ಸು ಮಾಡಿ ದೇಹತ್ಯಾಗ ಮಾಡಿದ ಭದ್ರಬಾಹುಗವಿಯು ಚಿಕ್ಕಬೆಟ್ಟದ ಪವಿತ್ರತಾಣಗಳಲ್ಲೊಂದಾಗಿದೆ. ಈ ಮುನಿಗಳ ಪಾದಕಮಲಗಳನ್ನು

ಅಲ್ಲಿ ಮೂಡಿಸಲಾಗಿದೆ. ಚಂದ್ರಗುಪ್ತನೂ ಅವರೊಡನೆಯೇ ಆ ಗುಹೆಯಲ್ಲಿದ್ದುಕೊಂಡು ದೇಹತ್ಯಾಗ ಮಾಡಿರಬೇಕು. ಚಾವುಂಡರಾಯ ಶಿಲೆ, ಕೂಗೆಬ್ರಹ್ಮ ದೇವರಸ್ತಂಭ, ಮಹಾನವಮಿ ಮಂಟಪ, ಇರುವೆ ಬಸದಿ ಮುಂತಾದವೂ ಚಿಕ್ಕಬೆಟ್ಟದ ವಿಶಿಷ್ಟ ಸ್ಮಾರಕಗಳಾಗಿವೆ. ಆದಿತೀರ್ಥಂಕರನ ಪುತ್ರರತ್ನರಲ್ಲಿ ಭರತ ಮತ್ತು ಬಾಹುಬಲಿಯರು ಅತ್ಯಂತ ಪ್ರಸಿದ್ಧರು. ಈ ಚಿಕ್ಕಬೆಟ್ಟದಲ್ಲಿ ಅಣ್ಣನಾದ ಭರತನ ಶಿಥಿಲಗೊಂಡ ಮೂರ್ತಿಯೊಂದಿದೆ. ಅದನ್ನು ಮೊಣಕಾಲಿನಿಂದ ಪ್ರಾರಂಭಿಸಿಕೊಂಡು ಮೇಲಕ್ಕೆ ಕಡೆಯಲಾಗಿದೆ.

**ಊರೊಳಗಣ ಜಿನಾಲಯಗಳು :** ಭಂಡಾರಿಬಸದಿ, ಅಕ್ಕನಬಸದಿ ಎಂಬಂತೆ ಆರು ಬಸದಿಗಳು ಊರೊಳಗಿವೆ. ಆ ಗುಂಪಿನಲ್ಲಿ ಭಂಡಾರಿಬಸದಿಯೇ ಅತ್ಯಂತ ದೊಡ್ಡದು. ಅದರಲ್ಲಿ ಸಾಲಾಗಿ ಎಲ್ಲ ಇಪ್ಪತ್ತನಾಲ್ಕು ತೀರ್ಥಂಕರರ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಾರೆ. ಬಸದಿಯ ಮುಂದೆ ಸಮುನ್ನತವಾದ ಮಾನಸ್ತಂಭವಿದೆ. ಅಕ್ಕನಬಸದಿಯಲ್ಲಿ ಪಾರ್ಶ್ವನಾಥಸ್ವಾಮಿಯ ಉಜ್ವಲವಾದ ಮೂರ್ತಿಯಿದೆ. ಸಿದ್ಧಾಂತಬಸದಿಯಲ್ಲಿ (೧೭೦೦ ನೇ ಇಸವಿ) ಮಧ್ಯದಲ್ಲಿ ಪಾರ್ಶ್ವನಾಥಸ್ವಾಮಿಯಿರುವಂತೆ ಏಕಶಿಲೆಯಲ್ಲಿ ಎಲ್ಲ ತೀರ್ಥಂಕರರ ಬಿಂಬಗಳೂ ಇವೆ. ಈ ಹಿಂದೆ ಆ ಬಸದಿಯಲ್ಲಿ ಜೈನಸಿದ್ಧಾಂತ ಗ್ರಂಥಗಳನ್ನು ಸಂರಕ್ಷಿಸುತ್ತಿದ್ದುದರಿಂದ ಸಿದ್ಧಾಂತ ಬಸದಿ ಎಂಬ ಹೆಸರು ಉಳಿದುಬಂದಿದೆ. ದಾನಶಾಲಾ ಬಸದಿಯಲ್ಲಿ ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಮುನಿ ಎಂಬ ಪಂಚಪರಮೇಷ್ಠಿಗಳ ಏಕಶಿಲಾಬಿಂಬಗಳಿವೆ. ನಗರ ಜಿನಾಲಯ (೧೧೯೫ ನೇ ಇಸವಿ) ಆದಿನಾಥನಿಗೆ, ಮಂಗಾಯಿಬಸದಿ ಎಂಬುದು (೧೩೨೫ ನೇ ಇಸವಿ) ಶಾಂತಿನಾಥನಿಗೆ ಸಮರ್ಪಿತವಾಗಿವೆ.

**ಜೈನಮತ ಪರಂಪರೆ :** ಜೈನಧರ್ಮದ ಸಂರಕ್ಷಣೆ ಮತ್ತು ಪ್ರಚಾರಕ್ಕಾಗಿ ಚಾವುಂಡರಾಯನೇ ಕ್ರಿ.ಶ. ೯೮೧ರಲ್ಲಿ ಶ್ರವಣಬೆಳಗೊಳದಲ್ಲಿ ಜೈನಮಠವೊಂದನ್ನು ನಿರ್ಮಿಸಿ ಮಹೋಪಕಾರ ಮಾಡಿದ್ದಾನೆ. ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳೆಂಬ ಮಹಾಪುರುಷರು ಅದರ ಪ್ರಥಮ ಪೀಠಾಧಿಪತಿಗಳಾಗಿದ್ದರು. ಆ ಪರಂಪರೆಯು ಹಾಗೆಯೇ ಮುಂದುವರಿದು ಈಗ ಸ್ವಸ್ತಿಶ್ರೀ ಚಾರುಕೀರ್ತಿಭಟ್ಟಾರಕ ಮಹಾಸ್ವಾಮಿಗಳು ಆ ಪೀಠವನ್ನು ಅಲಂಕರಿಸಿದ್ದಾರೆ. 'ಕರ್ಮಯೋಗಿ' ಎಂದು ಕೀರ್ತಿವಂತರಾಗಿರುವ ಅವರು, ಧರ್ಮಪ್ರಚಾರ ಮಾತ್ರವಲ್ಲದೆ ವಿದ್ಯಾಪ್ರಸಾರ, ಜೈನಶಾಸ್ತ್ರ ಸಂಶೋಧನೆ, ಪ್ರಾಕೃತ ಅಧ್ಯಯನ ಹಾಗೂ ಸಮಾಜ ಸೇವಾಕಾರ್ಯಗಳಿಗೂ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ. ಮಠದ ಗುಡಿಯಲ್ಲಿಯೂ ಬೇಕಾದಷ್ಟು ಜಿನಬಿಂಬಗಳು ಪೂಜೆಗೊಳ್ಳುತ್ತಿವೆ. ಅಲ್ಲಿನ ಗೋಡೆಯ ಮೇಲೆ ಆಕರ್ಷಕವಾದ ವರ್ಣಚಿತ್ರಗಳಿವೆ.

## ಮೂಡುಬಿದಿರೆ

**ಸಾಮಂತ ಅರಸುಮನೆತನಗಳು:** ಹದಿಮೂರನೆಯ ಶತಮಾನದ ತರುವಾಯ ಕನ್ನಡನಾಡಿನಲ್ಲಿ ಜೈನಧರ್ಮವು ಕ್ಷೀಣಿಸತೊಡಗಿತಾದರೂ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಾತ್ರ ಅದು ತನ್ನ ವೈಭವವನ್ನು ಕಾಪಾಡಿಕೊಂಡಿದ್ದುದು ವಿಶೇಷ ಸಂಗತಿಯೆಂದೇ ಹೇಳಬೇಕು. ವಿಜಯನಗರದ ಸಾರ್ವಭೌಮರ ಅಧೀನದಲ್ಲಿದ್ದುಕೊಂಡು, ಆ ಜಿಲ್ಲೆಯ ವಿವಿಧ ಭಾಗಗಳನ್ನಾಳುತ್ತಿದ್ದ ಸಾಮಂತ ಅರಸು ಮನೆತನದವರು ಜೈನಧರ್ಮೀಯರಾಗಿದ್ದು, ಆ ಧರ್ಮದ ಬೆಳವಣಿಗೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಮಂಗಳೂರು ಪ್ರಾಂತ್ಯದಲ್ಲಿ ಚೌಟ ಎಂಬ ಹೆಸರಿನ (೧೧೬೦–೧೮೬೭) ಅರಸು ಮನೆತನದವರು ಆಳ್ವಿಕೆ ನಡೆಸುತ್ತಿದ್ದು, ಮೂಡಬಿದಿರೆಯು ೧೬೪೩–೧೮೬೭ ರ ಅವಧಿಯಲ್ಲಿ ಅವರ ರಾಜಧಾನಿಯೂ ಆಗಿತ್ತು. ಆ ಕಾಲಾವಧಿಯಲ್ಲಿ ಮೂಡುಬಿದಿರೆಯು ಪ್ರಸಿದ್ಧ ಜೈನಕ್ಷೇತ್ರವಾಗಿ ಮೇಲೆದ್ದು ಬಂದಿತು.

**ಮೂಡುಬಿದಿರೆಯೆಂದರೆ ಜೈನಕಾಶಿ:** ಶ್ರವಣಬೆಳಗೊಳವು 'ಜೈನ ಬದರಿ' ಯಾದರೆ, ಮೂಡುಬಿದಿರೆಯು 'ಜೈನಕಾಶಿ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಲ್ಲಿ ಹದಿನೆಂಟು ಬಸದಿಗಳಿದ್ದು ಆ ಪೈಕಿ 'ಸಾವಿರಕಂಬದ ಬಸದಿ' ಎಂದು ಪ್ರಖ್ಯಾತವಾಗಿರುವ


ಸಾವಿರ ಕಂಬದ ಬಸದಿ

ಚಂದ್ರಪ್ರಭಸ್ವಾಮಿಯ ಸನ್ನಿಧಾನವು ಲೋಕವಿಶ್ರುತವಾಗಿದೆ. ಅದನ್ನು 'ತ್ರಿಭುವನತಿಲಕಚೂಡಾಮಣಿ' ಎಂದು ಕೊಂಡಾಡಲಾಗಿದೆ. ಮೂಡುಬಿದಿರೆಯ ಶ್ರಾವಕರೇ (ಜೈನಗೃಹಸ್ಥರು) ಅದನ್ನು ಜಗತ್ತಿಗೆ ಅಚ್ಚರಿಯಾಗುವಂತೆ (೧೪೨೯–೧೪೬೨) ನಿರ್ಮಿಸಿದರೆಂದು ಶಾಸನದಲ್ಲಿ ಹೇಳಿದೆ. ಮೂರು ಅಂತಸ್ತುಗಳಿಂದ ಮೆರೆಯುವ ಅದರ ವಿಸ್ತಾರವೇನು, ಔನ್ನತ್ಯವೇನು, ಕಲಾ ಸೌಂದರ್ಯವೇನು! ಆ ಬಸದಿಯ ಮುಂದುಗಡೆಯಲ್ಲಿ ೫೦ ಅಡಿ ಎತ್ತರದ ಭವ್ಯವೂ ಕಲಾತ್ಮಕವೂ ಆದ ಏಕಶಿಲಾ ಮಾನಸ್ತಂಭವು ತಲೆಯೆತ್ತಿ ನಿಂತಿದೆ. ಗೋಪುರದ್ವಾರ ಮಂಟಪ, ಭೈರಾದೇವಿ ಮಂಟಪ, ಚಿತ್ರಾದೇವಿ ಮಂಟಪ ಮುಂತಾದ ಏಳುಮಂಟಪಗಳಿದ್ದು, ಅವೆಲ್ಲವೂ ಅಖಂಡವಾಗುವಂತೆ ಒಂದಕ್ಕೊಂದು ಬೆಸೆದುಕೊಂಡ ಮಹೋನ್ನತ ರಚನೆ ಅದಾಗಿದೆ. ಗೊಮ್ಮಟಮೂರ್ತಿಗಳ ಸಾಲಿನಲ್ಲಿ ಶ್ರವಣಬೆಳಗೊಳದ ಗೊಮ್ಮಟನಿಗೆ ಸಮನಾದುದು ಹೇಗೆ ಮತ್ತೊಂದಿಲ್ಲವೋ, ಹಾಗೆಯೇ ಬಸದಿಗಳ ಸಾಲಿನಲ್ಲಿ ಈ ಸಾವಿರ ಕಂಬದ ಬಸದಿಯನ್ನು ಮೀರಿಸುವ ರಚನೆ ಮತ್ತೊಂದಿಲ್ಲ.

ಬಸದಿಯ ಮೂರನೆಯ ಅಂತಸ್ತಿನ ಮೇಲ್ಛಾವಣಿಗೆ ಹೊದಿಸಿರುವ ತಾಮ್ರದ ತಗಡುಗಳು ದೂರದಿಂದಲೇ ನೋಡುವವರ ಕಣ್ಣುಗಳನ್ನು ಸೆಳೆದುಕೊಳ್ಳುತ್ತವೆ. ಬೌದ್ಧದೇವಾಲಯಗಳ ಆಕೃತಿಯನ್ನು ಆ ಶಿಲ್ಪವು ನೆನಪಿಗೆ ತರುವಂತಿದೆ. ಗರ್ಭಗೃಹದಲ್ಲಿ ಅಷ್ಟಮ ತೀರ್ಥಂಕರನಾದ ಚಂದ್ರಪ್ರಭಸ್ವಾಮಿಯ ಮಿರಮಿರನೆ ಮಿಂಚುವ ಸುಮಾರು ಆರೂವರೆ ಅಡಿ ಎತ್ತರದ ಪಂಚಲೋಹದ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಆ ಬಿಂಬವು ಅತ್ಯಂತ ನಯನಮನೋಹರವಾಗಿದೆ. ಎರಡನೆಯ ಮಹಡಿಯಲ್ಲಿ ಪಾರ್ಶ್ವನಾಥಸ್ವಾಮಿಯ ಮತ್ತು ಬೇರೆ ಬೇರೆ ತೀರ್ಥಂಕರರ ಬಿಂಬಗಳನ್ನು ಸ್ಥಾಪಿಸಿದ್ದಾರೆ. ಅಲ್ಲಿಯೇ ಇರುವ 'ಸಹಸ್ರಕೂಟ'ವೆಂದು ಕರೆಯುವ ರಚನೆಗೆ ಅರ್ಹಂತರ ಸಾವಿರ ಕಂಚಿನ ಬಿಂಬಗಳನ್ನು ಬೆಸೆದಿದ್ದಾರೆ. 'ಗಣಧರವಲಯ' ಎಂದು ಕರೆಯುವ ಶಿಲ್ಪವೂ ಅಲ್ಲಿ ಅಪೂರ್ವವಾದುದೆನಿಸಿದೆ. ಮೂರನೆಯ ಅಂತಸ್ತಿನಲ್ಲಿಯೂ ತೀರ್ಥಂಕರರ ಬಿಂಬಗಳ ಸಮೂಹವಿದೆ. ಆ ಚೈತ್ಯಾಲಯದಲ್ಲಿರುವ ಎಲ್ಲ ಶಿಲ್ಪಗಳನ್ನು ಹೆಸರು ಹೇಳಿ ವರ್ಣಿಸುವುದು ಅಸಾಧ್ಯವೇ ಸರಿ.

**ಕಗ್ಗಲ್ಲಿನಿಂದ ಕಡೆದ ಕಂಬಗಳ ವೈಭವ :** 'ತ್ರಿಭುವನತಿಲಕಚೂಡಾಮಣಿ'ಯ ಬೇರೆ ಬೇರೆ ಮಂಟಪಗಳಲ್ಲಿರುವ ಕಗ್ಗಲ್ಲಿನ ಕಂಬಗಳಲ್ಲಿ ಶಿಲ್ಪಕಲಾಕೋವಿದರು ಆಕರ್ಷಕ ಕಲಾಕೃತಿಗಳನ್ನು ಮೂಡಿಸಿದ್ದಾರೆ. ವೈವಿಧ್ಯಮಯವಾದ ಆ ಕಂಬಗಳೇ ಶ್ರೇಷ್ಠ ಶಿಲ್ಪಗಳಾಗಿವೆ. ಕೆಲವೆಡೆ ಒಂದೇ ಕಂಬದೊಳಗೆ ಕಿರುಕಂಬಗಳನ್ನು ಕೊರೆದಿರುವ ಕೌಶಲ ಕೊಂಡಾಡುವಂತಿದೆ. ಕೋಲಾಟವಾಡುತ್ತಿರುವ ತರುಣಿಯರು, ಹುಲ್ಲಿಗೆ ಮೇವು ನೀಡುತ್ತಿರುವ ಹರಿಣಾಕ್ಷಿ, ವಾದ್ಯಗಾರ್ತಿಯರು, ಒಂಟೆಯೇರಿದ ಯಾತ್ರಿಕ, ಕಾಡುಹಂದಿಯ ಆರ್ಭಟಕ್ಕಂಜಿ ಚಂಗನೆ ಜಿಗಿಯುತ್ತಿರುವ ಚಿಗರೆಗಳು, ಹಸುವಿನ ಕೆಚ್ಚಲು ಹೀರುತ್ತಿರುವ ಹುಲಿಯ ಮರಿ, ಖಡ್ಗಯುದ್ಧ, ಮಲ್ಲಯುದ್ಧ ಮುಂತಾದ ಶಿಲ್ಪಗಳು ಬಹಳ ಕುತೂಹಲಕಾರಿಯಾಗಿವೆ. ಡ್ರ್ಯಾಗನ್ ಎಂದು ಕರೆಯುವ ಚೀನಾದೇಶದ ಪೌರಾಣಿಕಪ್ರಾಣಿಯೂ ಅಲ್ಲಿದೆ. ಅದಕ್ಕೆ ಮೊಸಳೆಯಂತೆ ಶರೀರವಿದೆ, ಹಕ್ಕಿಯಂತೆ ರೆಕ್ಕೆಗಳಿವೆ, ಬಾಯಗಲಿಸಿ ಬೆಂಕಿಯ ಜ್ವಾಲೆಯನ್ನು ಅದು ಉಗುಳುತ್ತಿದೆ. ಒಂದು ಜಿರಾಫೆಯ ಶಿಲ್ಪವೂ ಅಲ್ಲಿದೆ. **"ಆ ಚೈತ್ಯಕೌಶಲ್ಯವನ್ನು ಪರಿಭಾವಿಸುತ್ತ ವಿಶ್ವಕರ್ಮನೂ ತಲೆದೂಗಬೇಕು"** ಎಂದು ಶಾಸನಕವಿಯೊಬ್ಬನು ಆ ಬಸದಿಯನ್ನು ಕೊಂಡಾಡಿರುವುದು ಯಥಾರ್ಥವೇ ಆಗಿದೆ.

**ಗುರುಬಸದಿಯ ರತ್ನಮಯ ಜಿನಬಿಂಬಗಳು:** ಮೂಡಬಿದಿರೆಯ ಬಸದಿಗಳ ಪರಂಪರೆಯಲ್ಲಿ ಗುರುಬಸದಿ ಎಂಬುದು ಅತ್ಯಂತ ಪ್ರಾಚೀನವಾದುದು. ಹಲವು ದಿಕ್ಕುಗಳಿಂದ ಅದಕ್ಕೆ ವೈಶಿಷ್ಟ್ಯಗಳು ಕೂಡಿಬಂದಿವೆ. ಅಲ್ಲಿರುವ ಪಾರ್ಶ್ವನಾಥ ತೀರ್ಥಂಕರನ ಎಂಟು ಅಡಿ ಎತ್ತರದ ಶಿಲಾಬಿಂಬದ ಮುಖಮುದ್ರೆ ಮೋಹಕವಾಗಿದೆ. ತಲೆಯ ಮೇಲೆ ಛತ್ರದಂತೆ ಬಿಚ್ಚಿಕೊಂಡಿರುವ ಸರ್ಪನ ಹೆಡೆಗಳು ಅತ್ಯಂತ ಕಲಾತ್ಮಕವಾಗಿವೆ. 'ಷಟ್ಖಂಡಾಗಮ' ಎಂಬುದು ಜೈನ ಸಿದ್ಧಾಂತಗಳನ್ನು ನಿರೂಪಿಸುವ ಪ್ರಾಕೃತ ಭಾಷೆಯ ಪುರಾತನ ಗ್ರಂಥ. ವೀರಸೇನಾಚಾರ್ಯರೆಂಬ ಮುನಿಗಳು ಬಹಳ ಹಿಂದೆಯೇ ಆ ಗ್ರಂಥಕ್ಕೆ ಪ್ರಾಕೃತಭಾಷೆಯಲ್ಲಿಯೇ ಧವಳ, ಜಯಧವಳ, ಮಹಾಧವಳ ಎಂಬ ಹೆಸರಿನ ಟೀಕಾಗ್ರಂಥ ಸಂಪುಟಗಳನ್ನು ಬರೆದಿದ್ದಾರೆ. ಆ ಟೀಕೆಗಳನ್ನು ಅಂದವಾದ ಕನ್ನಡಲಿಪಿಯಲ್ಲಿ ಓಲೆಗರಿಗಳ ಮೇಲೆ ಬರೆದಿಟ್ಟುಕೊಂಡಿರುವ ಹಸ್ತಪ್ರತಿಗಳ ಕಟ್ಟುಗಳು ಆ ಬಸದಿಯ ವೈಶಿಷ್ಟ್ಯಗಳಲ್ಲೊಂದು. ಆ ಓಲೆಗರಿಗಳಲ್ಲಿ ತತ್ತ್ವವಿಚಾರಗಳು ಇರುವುದಲ್ಲದೆ, ಅವುಗಳ ಅಂಚುಗಳಲ್ಲಿ 'ಚಿಕಣಿಚಿತ್ರಗಳು' ಎಂದು ಕರೆಯುವ, ತುಳುನಾಡಿನ ಶೈಲಿಯ, ಚಿಕ್ಕಚಿಕ್ಕ ಚಿತ್ರಗಳಿವೆ. ತೀರ್ಥಂಕರರು, ಶಾಸನದೇವತೆಗಳು, ಮುನಿಜನರು, ಭಕ್ತರು, ರಾಜರಾಣಿಯರು, ಗಿಡಮರಬಳ್ಳಿಗಳು, ಸರ್ಪ, ನವಿಲು ಮುಂತಾದುವುಗಳ ಸುಂದರಚಿತ್ರಗಳು ಅದರಲ್ಲಿವೆ.

ಆ ಗುರುಬಸದಿಯಲ್ಲಿ ನವರತ್ನ ನಿರ್ಮಿತವಾದ ಸುಮಾರು ಮೂವತ್ತೈದು ಜಿನಬಿಂಬಗಳನ್ನು ರಕ್ಷಿಸಿಟ್ಟಿರುವುದು ಅಲ್ಲಿನ ಹಿರಿಮೆಗೆ ಕೋಡುಮೂಡಿಸಿದೆ. ಅವು ಅರ್ಧ ಅಂಗುಲದಿಂದ ಹಿಡಿದು, ಹತ್ತು ಅಂಗುಲದವರೆಗಿರುವ ಬೆಲೆಕಟ್ಟಲಾಗದ ಅನರ್ಘ್ಯ ಪ್ರತಿಮೆಗಳಾಗಿವೆ. ಯಾತ್ರಿಕರಾಗಿ ಬರುವ ಜಿನಭಕ್ತರು ವಿಶೇಷ ದ್ರವ್ಯವನ್ನು ಪಾವತಿ ಮಾಡಿ, ಅರ್ಚಕರ ನೇತೃತ್ವದಲ್ಲಿ ಆ ಸಿದ್ಧಾಂತ ಗ್ರಂಥಗಳ ಹಾಗೂ ರತ್ನಬಿಂಬಗಳ ದರ್ಶನಮಾಡಿ ಪುನೀತರಾಗುತ್ತಾರೆ.

**ಮಹಾಭಾರತಕ್ಕೆ ೧೮ ಪರ್ವಗಳು ಮೂಡುಬಿದಿರೆಗೆ ೧೮ ಬಸದಿಗಳು:** ಮೂಡುಬಿದಿರೆಯು ಬಸದಿಗಳ ಪಟ್ಟಣ. ಪಡುಬಸದಿ, ಬೈಕಣತಿಕಾರಿಬಸದಿ (ಬೆಂಕಿಬಸ್ತಿ) ಮಾದಿಸೆಟ್ಟಿಬಸದಿ ಮುಂತಾದ ಹೆಸರಿನ ಒಟ್ಟು ೧೮ ಬಸದಿಗಳಿಗೆ ಅದು ಆಶ್ರಯ ಸ್ಥಾನವಾಗಿದೆ. ಪಡುಬಸದಿಯು ಶೀತಲನಾಥ (೧೦ ನೇ ತೀರ್ಥಂಕರ), ಅನಂತ ನಾಥ (೧೪ನೇ ತೀರ್ಥಂಕರ) ಮತ್ತು ಧರ್ಮನಾಥರ (೧೫ನೇ ತೀರ್ಥಂಕರ) ಸನ್ನಿಧಾನವಾಗಿದೆ. ಬೈಕಣತಿಕಾರಿಬಸದಿಯಲ್ಲಿಯೂ ಅನಂತನಾಥಸ್ವಾಮಿಯು ಪ್ರತಿಷ್ಠಿತನಾಗಿದ್ದಾನೆ. ಮಾದಿಸೆಟ್ಟಿ ಬಸದಿಯಲ್ಲಿ ಆದಿನಾಥನು ಪೂಜೆಗೊಳ್ಳುತ್ತಿದ್ದಾನೆ. ಚೋಳಸೆಟ್ಟಿ ಬಸದಿಯು ಸುಮತಿ(೫ ನೇ ತೀರ್ಥಂಕರ) ಪದ್ಮಪ್ರಭ (೬ ನೇ ತೀರ್ಥಂಕರ) ಸುಪಾರ್ಶ್ವತೀರ್ಥಂಕರರಿಗೆ (೭ ನೇ ತೀರ್ಥಂಕರ) ಮೀಸಲಾಗಿದೆ. ದೇರಮ್ಮಸೆಟ್ಟಿಬಸದಿಯು ಅಮರನಾಥ (೧೮ ನೇ

ತೀರ್ಥಂಕರ) ಮಲ್ಲಿನಾಥ (೧೯ ನೇ ತೀರ್ಥಂಕರ) ಮುನಿಸುವ್ರತ ಸ್ವಾಮಿಯರು (೨೦ನೇ ತೀರ್ಥಂಕರ) ನೆಲೆಯಾಗಿರುವ ತಾಣವಾಗಿದೆ. ಲೆಪ್ಪದಬಸದಿಯಲ್ಲಿ ಮೃಣ್ಮಯವಿಗ್ರಹವು ಪೂಜೆಗೊಳ್ಳುತ್ತಿರುವುದೊಂದು ವಿಶೇಷವೆನಿಸಿದೆ. ಜೇಡಿಮಣ್ಣಿಗೆ ವಿಶಿಷ್ಟ ದ್ರವ್ಯಗಳನ್ನು ಸೇರಿಸಿ ನಿರ್ಮಿಸಿರುವ ಚಂದ್ರಪ್ರಭಸ್ವಾಮಿಯು ಅಲ್ಲಿದ್ದಾನೆ. ಕಲ್ಲುಬಸದಿಯೆಂದು ಕರೆದಿರುವೆಡೆಯಲ್ಲೂ ಶೀತಲನಾಥತೀರ್ಥಂಕರನಿದ್ದಾನೆ.

ವಿಕ್ರಮಶೆಟ್ಟಿಬಸದಿ ಎಂಬುದು ಪ್ರಥಮ ತೀರ್ಥಂಕರನ ಆವಾಸವಾಗಿದೆ. ವಿಕ್ರಮಶೆಟ್ಟಿ ಎಂಬ ಮೂಡುಬಿದಿರೆಯ ವ್ಯಕ್ತಿಯೊಬ್ಬನು ಕೂಲಿನಾಲಿ ಮಾಡಿಕೊಂಡು ಬಡತನದಲ್ಲಿ ಜೀವನ ಸಾಗಿಸುತ್ತಿದ್ದನು. ಅಲ್ಲಿನ ಬಸದಿಯೊಂದರಲ್ಲಿ ಪಂಚಕಲ್ಯಾಣವೆಂಬ ಮಹೋತ್ಸವವಾಗುವಾಗ, ಪ್ರಸಾದವಿತರಣೆಯ ವೇಳೆಯಲ್ಲಿ ವಿಕ್ರಮಶೆಟ್ಟಿಯು ಕೈ ನೀಡಿದಾಗ ಸುಮ್ಮನಿರದೆ ಯಾರೋ "ನೀನೇಕೆ ಆ ತೆಂಗಿನಕಾಯಿ ಬಟ್ಟಲಿಗೆ ಕೈಚಾಚುತ್ತಿದ್ದೀಯೆ, ಮಾರಾಯ" ಎಂದು ಮೂದಲಿಸಿಬಿಟ್ಟರು. ಅದರಿಂದ ನೊಂದ ಶೆಟ್ಟಿಯು ಅತ್ಯಂತ ಪರಿಶ್ರಮದಿಂದ ದ್ರವ್ಯಸಂಗ್ರಹ ಮಾಡಿ ತಾನೇ ಒಂದು ಬಸದಿಯನ್ನು ಎತ್ತಿಸಿಬಿಟ್ಟನು. ಅಲ್ಲಿ ಆದಿನಾಥನನ್ನು ಸ್ಥಾಪಿಸಿ, ಪಂಚಕಲ್ಯಾಣ ಮಾಡಿಸಿ, ತೆಂಗಿನಬಟ್ಟಲು ಪ್ರಸಾದವನ್ನು ಯಾರ ಚುಚ್ಚುನುಡಿಯೂ ಇಲ್ಲದೆ ಪಡೆದುಕೊಂಡನೆಂದು ಐತಿಹ್ಯವಿದೆ. ಶೆಟ್ಟರ ಬಸದಿಯೆಂಬುದು ಬಂಗೋತ್ತಮ ಶೆಟ್ಟಿಯೆಂಬಾತನು ಕಟ್ಟಿಸಿದ ವರ್ಧಮಾನತೀರ್ಥಂಕರನ ಸನ್ನಿಧಾನವಾಗಿದೆ. ಬಂಗೋತ್ತಮನು ತನ್ನ ರತ್ನಪರೀಕ್ಷೆಯ ಪ್ರಾವೀಣ್ಯದಿಂದ ರತ್ನದ್ವೀಪದ ದೊರೆಯನ್ನು ಮೆಚ್ಚಿಸಿ, ಅವನು ಕೊಟ್ಟ ದ್ರವ್ಯವನ್ನು ಒಂಟೆಯ ಮೇಲೆ ಹೇರಿಕೊಂಡುಬಂದು, ಆ ಬಸದಿಯನ್ನು ಕಟ್ಟಿಸಿದನಂತೆ.

ಬೆಟ್ಕೇರಿಬಸದಿಯು ವರ್ಧಮಾನಸ್ವಾಮಿಗೆ, ಬಡಗಬಸದಿಯು ಚಂದ್ರನಾಥಸ್ವಾಮಿಗೆ, ಕೆರೆಬಸದಿಯು ಮಲ್ಲಿನಾಥಸ್ವಾಮಿಗೆ, ಕೋಟಿಬಸದಿಯು ನೇಮಿನಾಥಸ್ವಾಮಿಗೆ, ಹಿರೇಬಸದಿಯು ಶಾಂತಿನಾಥಸ್ವಾಮಿಗೆ ಆಲಯಗಳಾಗಿವೆ. ಹಿರೇಬಸದಿಯಲ್ಲಿ ಪದ್ಮಾವತಿಯಕ್ಷಿ ಮತ್ತು ಸರಸ್ವತಿದೇವಿಯರು ಪೂಜೆಗೊಳ್ಳುತ್ತಿರುವುದೊಂದು ವಿಶೇಷವೆನಿಸಿದೆ. ಸರಸ್ವತಿಯೆಂದರೆ ಹಿಂದೂಧರ್ಮದ ಹಿನ್ನೆಲೆಯಲ್ಲಿ ವಿದ್ಯಾಧಿದೇವತೆಯೆನಿಸಿದ್ದಾಳೆ. **'ಪರಮ ಜಿನೇಂದ್ರ ವಾಣಿಯೆ ಸರಸ್ವತಿ. ಬೇರದು ಪೆಣ್ಣುರೂಪಮಂ ಧರಿಯಿಸಿ ನಿಂದುದಲ್ತು'** – ತೀರ್ಥಂಕರರ ಮುಖದಿಂದ ಹೊಮ್ಮಿದ ತತ್ವವಿಚಾರಗಳೇ ಸರಸ್ವತಿ; ಅದು ಸ್ತ್ರೀರೂಪವನ್ನು ತಾಳಿಕೊಂಡ ವ್ಯಕ್ತಿಯಲ್ಲ ಎಂದು ಪಂಪಮಹಾಕವಿಯು ಜೈನಧರ್ಮಕ್ಕೊಪ್ಪುವ ವಿವರಣೆಯನ್ನು ನೀಡಿದ್ದಾನೆ. ತೀರ್ಥಂಕರರು ಮುಕ್ತಾತ್ಮರು. ಅವರು ಬೆಳಕಿನ ಶರೀರದ ರೂಪದಲ್ಲಿ ಲೋಕಾಗ್ರದಲ್ಲಿ ನೆಲೆಸಿದ್ದಾರೆಂಬುದು ಶಾಸ್ತ್ರೋಕ್ತವಾದ ವಿಚಾರ. ಅವರು ಶ್ರಾವಕರ ಲೌಕಿಕವಾದ ಬೇಕುಬೇಡಗಳನ್ನು ಈಡೇರಿಸಿಕೊಡುವುದಿಲ್ಲ. ಅದಕ್ಕಾಗಿ ತೀರ್ಥಂಕರರ ಸೇವಾವರ್ಗಕ್ಕೆ ಸೇರುವ ಯಕ್ಷಯಕ್ಷಿಯರನ್ನು ಪೂಜಿಸಿ, ಅವರಿಂದ ಲೌಕಿಕ ಲಾಭಗಳನ್ನು ಸಂಪಾದಿಸಿಕೊಳ್ಳಬೇಕೆಂಬ ಸಂಗತಿ ಪ್ರಚಲಿತವಾಗಿದೆ.

**ಜೈನಮಠ ಪರಂಪರೆ :** ಹನ್ನೆರಡನೆಯ ಶತಮಾನದ ಯಾವುದೋ ಕಾಲಘಟ್ಟದಲ್ಲಿ ರೂಪುಗೊಂಡ ಜೈನಮಠ ಪರಂಪರೆಯೊಂದು ಮೂಡುಬಿದರೆಯಲ್ಲಿ ಉಳಿದುಬಂದು ಊರ್ಜಿತಾವಸ್ಥೆಯಲ್ಲಿದೆ. ಮಠದಲ್ಲಿಯೂ ಪಾರ್ಶ್ವನಾಥ ಸ್ವಾಮಿಯ ಒಂದು ಪೂಜಾಗೃಹವಿದ್ದು, ಅದು 'ಮಠದಬಸದಿ' ಎಂದು ಕರೆಸಿಕೊಂಡಿದೆ. ಮಠದ ಎದುರಿನಲ್ಲಿರುವ ಪಾಠಶಾಲೆಗೆ ಹೊಂದಿಕೊಂಡಂತೆ ಮುನಿಸುವ್ರತಸ್ವಾಮಿಯ ಸನ್ನಿಧಾನವಿದ್ದು ಅದು ಪಾಠಶಾಲಾಬಸದಿ ಎಂದು ಕರೆಸಿಕೊಳ್ಳುತ್ತಿದೆ. ಅದಕ್ಕೆ ಸಮೀಪದಲ್ಲಿಯೇ 'ವೀರವಾಣಿವಿಲಾಸ ಜೈನಸಿದ್ಧಾಂತಭವನ' ವೊಂದು ನೂತನವಾಗಿ ರೂಪುಗೊಂಡು ಅಲ್ಲಿ ಜೈನಸಿದ್ಧಾಂತಕ್ಕೆ ಸಂಬಂಧಿಸಿದ ಪ್ರಾಚೀನ ಓಲೆಗರಿಯ ಹಸ್ತಪ್ರತಿಗಳನ್ನು ಸಂರಕ್ಷಣೆ ಮಾಡಿದ್ದಾರೆ. 'ರಮಾರಾಣಿ ಜೈನ ಸಂಶೋಧನಸಂಸ್ಥೆ' ಯೊಂದು ಅಲ್ಲಿ ಕಾರ್ಯಪ್ರವೃತ್ತವಾಗಿದೆ.

ಮೂಡುಬಿದಿರೆಯ ಬಸದಿಗಳೆಲ್ಲ ಒಂದಕ್ಕೊಂದು ಆಸುಪಾಸಿನಲ್ಲಿಯೇ ಇದ್ದು, ಭಕ್ತರ ವೀಕ್ಷಣೆಗೆ ಅನುಕೂಲಕರವಾಗಿವೆ. ಕೆಲವು ಬಸದಿಗಳಿಗೆ ಮಾನಸ್ತಂಭಗಳಿದ್ದರೆ, ಮತ್ತೆ ಕೆಲವಕ್ಕಿಲ್ಲ. ಕೆಲವು ಶಿಲಾಮಯವಾಗಿದ್ದರೆ, ಮತ್ತೆ ಕೆಲವು ಸ್ಥಳೀಯ ಜಂಬಿಟ್ಟಿಗೆ ಎಂದು ಕರೆಯುವ ವಿಶೇಷ ಇಟ್ಟಿಗೆಗಳಿಂದ ರಚಿತವಾಗಿವೆ. ಕೆಲವು ಬಸದಿಗಳು ಎರಡೆರಡು ಅಂತಸ್ತುಗಳಿಂದ ಕೂಡಿದ್ದರೆ, ಕೆಲವಲ್ಲಿ ಗುಪ್ತಗೃಹಗಳು ನಿರ್ಮಾಣವಾಗಿವೆ. ಕೆಲವು ಬಸದಿಗಳಲ್ಲಿ ೨೪ ತೀರ್ಥಂಕರರಿರುವ ಉಪದೇವಗೃಹಗಳಿದ್ದರೆ, ಕೆಲವೆಡೆ ಮೂಲಬಿಂಬಗಳ ಪ್ರಭಾವಳಿಯಲ್ಲಿ ಮಿಕ್ಕೆಲ್ಲ ತೀರ್ಥಂಕರರ ಕಿರುಶಿಲ್ಪಗಳನ್ನು ಕಡೆದಿರುವ ಕೌಶಲ್ಯವಿದೆ. ಬಸದಿಯು ಪುಷ್ಕರಿಣಿಗಳ ಸನಿಹದಲ್ಲಿದ್ದರೆ ಕೆರೆಬಸದಿ, ಶಿಲಾಮಯವಾಗಿದ್ದರೆ ಕಲ್ಲುಬಸದಿ, ಕೋಟಿಶೆಟ್ಟಿಯು ನಿರ್ಮಾಣ ಮಾಡಿಸಿದ್ದರಿಂದ ಕೋಟಿಬಸದಿ, ಮಣ್ಣಿನಿಂದಾದ ಮೂರ್ತಿಯಿದ್ದರೆ ಲೆಪ್ಪದಬಸದಿ, ಉತ್ತರದಿಕ್ಕಿಗೆ ಮುಖವಾಗಿದ್ದರೆ ಬಡಗುಬಸದಿ ಎಂಬಂತೆ ಅವು ಕರೆಯಲ್ಪಟ್ಟು ಅವುಗಳಲ್ಲಿ ಪೂಜಿಸಲಾಗುತ್ತಿರುವ ತೀರ್ಥಂಕರನಾಮಗಳು ತೆರೆಮರೆಯಲ್ಲಿವೆ. ಒಟ್ಟಾರೆ ಮೂಡುಬಿದಿರೆಯಲ್ಲಿ ಬಸದಿಗಳ ಒಂದು ಅದ್ಭುತಲೋಕವೇ ಸೃಷ್ಟಿಗೊಂಡಿದೆ.

**ನಿಷಿಧಿಸ್ಮಾರಕಗಳು:** ಮೂಡುಬಿದಿರೆಯ ಹೊರವಲಯದಲ್ಲಿ ಗಮನಸೆಳೆಯುವ ಕೆಲವು ನಿಷಿಧಿಸ್ಮಾರಕಗಳಿವೆ. ಅವೆಲ್ಲ ಜೈನಮಠದ ಪೂರ್ವಕಾಲದ ಭಟ್ಟಾರಕರ ಸಮಾಧಿಗಳಾಗಿವೆ. ಐದು ಅಡಿಯಿಂದ ಇಪ್ಪತ್ತು ಅಡಿಯವರೆಗೂ ಎತ್ತರವಿರುವ, ಹಂತಹಂತವಾಗಿ ಮೇಲಕ್ಕೆ ಕಿರಿದಾಗುತ್ತ ಹೋಗುವ ಅಪರೂಪದ ರಚನೆಗಳು ಅವಾಗಿವೆ. ಫರ್ಗುಸನ್ ಎಂಬ ವಿದ್ವಾಂಸನು ಆ ರಚನೆಗಳು ನೇಪಾಳ, ಚೀನಾ, ಟಿಬೆಟ್‌ಗಳಲ್ಲಿರುವ ಪಗೋಡಾಗಳ ಇಳಿಜಾರು ರಚನಾಸ್ವರೂಪವನ್ನು ಹೋಲುತ್ತವೆಂದು ಹೊಗಳಿದ್ದಾನೆ.

**(ಮಾನ್ಯ ಲೇಖಕರು, ಇನ್ನಿತರ ಜೈನಕ್ಷೇತ್ರಗಳಾದ ಕಾರ್ಕಳ, ವೇಣೂರು, ಕಂಬದಹಳ್ಳಿ, ಮಲೆಯೂರು, ಸಿಂಹನಗದ್ದೆ, ಹುಂಚ, ಕೊಪ್ಪಳ, ವರೂರು, ಗೊಮ್ಮಟಗಿರಿಗಳ ಬಗ್ಗೆ 'ವಿವೇಕಪ್ರಭ' ದ ಮೇಲಿನ ತುಂಬು ವಿಶ್ವಾಸದಿಂದ ವಿಸ್ತಾರವಾಗಿ ಬರೆದುಕೊಟ್ಟಿದ್ದಾರೆ. ಅದನ್ನು ಪ್ರತ್ಯೇಕ ಲೇಖನವಾಗಿ ಮುಂದೊಮ್ಮೆ ಪ್ರಕಟಿಸಲಾಗುವುದು. ಈ ಲೇಖನದ ಮುಂದಿನ ಭಾಗವಾದ ಧರ್ಮಸ್ಥಳದ ವರ್ಣನೆಯನ್ನು ಮುಂದಿನ ಪುಟದಲ್ಲಿ ಓದಿರಿ –ಸಂ.)**

## ಧರ್ಮಸ್ಥಳ: ಧರ್ಮಸಮನ್ವಯ ಕ್ಷೇತ್ರ

**ಧರ್ಮಸ್ಥಳವು ಆಲಯಾಶ್ರಿತ ಗ್ರಾಮ:** ನಮ್ಮ ನಾಡಿನ ಪರಂಪರೆಯಲ್ಲಿ ಗ್ರಾಮಾಶ್ರಿತ ಆಲಯ, ಆಲಯಾಶ್ರಿತ ಗ್ರಾಮ ಎಂಬ ಎರಡು ವಿಧಗಳುಂಟು. 'ಗ್ರಾಮವೊಂದನ್ನು ಕಟ್ಟಿಕೊಂಡಿದ್ದೇವೆ, ಅದಕ್ಕೊಂದು ದೇವಾಲಯವು ಬೇಕು' ಎಂದು ಹಂಬಲಿಸಿ ಗುಡಿಯೊಂದನ್ನು ನಿರ್ಮಿಸಿ, ಪೂಜಿಸುತ್ತಿದ್ದರೆ ಅದು ಗ್ರಾಮವನ್ನು ಆಶ್ರಯಿಸಿಕೊಂಡಿರುವ ಗ್ರಾಮಾಶ್ರಿತ ಆಲಯ. ಯಾವುದೋ ಪುಣ್ಯಫಲದಿಂದ ದೇವಾಲಯವೊಂದು ನಿರ್ಮಾಣವಾಗಿ ತನ್ನ ಮಹಿಮಾವಿಶೇಷಗಳಿಂದ ಭಕ್ತರನ್ನು ಆಕರ್ಷಿಸಿ ತನ್ಮೂಲಕ ಅಲ್ಲೊಂದು ಗ್ರಾಮವು ನಿರ್ಮಾಣವಾಗಿದೆಯೆಂದಾದರೆ, ಅದು ಆಲಯಾಶ್ರಿತ ಗ್ರಾಮ. ಧರ್ಮಸ್ಥಳವು ಆಲಯಾಶ್ರಿತ ಗ್ರಾಮವಾಗಿ ಮೇಲೆ ಬಂದಿದೆ. ಧರ್ಮಸಮನ್ವಯ ಕ್ಷೇತ್ರವಾಗಿ ಬೆಳೆಯಲು ಆ ಸ್ವರೂಪವೊಂದು ಪ್ರಮುಖ ಕಾರಣವಾಗಿದೆ.

**ಹಿಂದೂಧರ್ಮ ಜೈನಧರ್ಮಗಳ ಒಡನಾಟ** : ಕನ್ನಡನಾಡಿನ ಪುಣ್ಯಕ್ಷೇತ್ರಗಳಲ್ಲಿ ಧರ್ಮಸ್ಥಳಕ್ಕೆ ಅನನ್ಯವಾದ ಸ್ಥಾನವಿದೆ. ಅದು ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಮಹಾಕ್ಷೇತ್ರ. ಮಂಜುನಾಥನೆಂಬ ಹೆಸರಿನ ಶಿವಮಹಾದೇವನು ಅಲ್ಲಿ ನೆಲೆಗೊಂಡು ಅದೊಂದು ಪ್ರಸಿದ್ಧವಾದ ಶೈವಕ್ಷೇತ್ರವಾಗಿದೆ. ಅದು 'ಧರ್ಮಾಧಿಕಾರಿ'ಗಳೆಂದು ಕರೆಯುವ ಧರ್ಮಪ್ರಭುಗಳ ಸ್ವತಂತ್ರ ಮೇಲ್ವಿಚಾರಣೆಯಲ್ಲಿ ಮುಂದುವರಿಯುತ್ತಿದೆ. ಆ ಧರ್ಮಪ್ರಭುಗಳಾದರೋ ಜೈನಧರ್ಮಾವಲಂಬಿಗಳಾಗಿದ್ದಾರೆ. ಮಂಜುನಾಥನ ಭಕ್ತರಾಗಿರುವುದರ ಜೊತೆಗೆ ಅವರು ತಮ್ಮ ಮನೆದೇವರಾದ ಚಂದ್ರನಾಥ ತೀರ್ಥಂಕರನ ಆರಾಧಕರಾಗಿದ್ದಾರೆ. ಆ ಸ್ವಾಮಿಯ ಒಂದು ಬಸದಿಯೂ ಮಂಜುನಾಥಸ್ವಾಮಿಯ ದೇವಾಲಯದ ವಲಯದಲ್ಲಿಯೇ ಇದ್ದು, ಅಲ್ಲಿನ ಪೂಜಾ ಕಾರ್ಯಗಳಿಗೆಲ್ಲ ಧರ್ಮಾಧಿಕಾರಿಗಳು ಪರಿಪೂರ್ಣವಾದ ವ್ಯವಸ್ಥೆ ಮಾಡಿದ್ದಾರೆ. ಇತ್ತೀಚಿಗೆ ಧರ್ಮಸ್ಥಳದಲ್ಲಿ ಗೊಮ್ಮಟೇಶ್ವರ ಎಂದೂ ಕರೆಯುವ ಬಾಹುಬಲಿಯ ಭವ್ಯಮೂರ್ತಿಯನ್ನು ಅವರು ಪ್ರತಿಷ್ಠಾಪಿಸಿ **'ಅಭಿನವ ಚಾವುಂಡರಾಯ'** ರೆನಿಸಿದ್ದಾರೆ. ಹಿಂದೂಗಳೆನ್ನದೆ ಜೈನರೆನ್ನದೆ ಎರಡೂ ಧರ್ಮಗಳ ಭಕ್ತರು ಧರ್ಮಸ್ಥಳದ ಯಾತ್ರೆಯಿಂದ ಕೃತಕೃತ್ಯರಾಗುತ್ತಾರೆ. ಹೀಗಾಗಿ ಅದು ಹಿಂದೂಧರ್ಮ ಜೈನಧರ್ಮಗಳು ಸೋದರಧರ್ಮಗಳಂತೆ ಬಾಳುತ್ತಿರುವ ಧರ್ಮಕ್ಷೇತ್ರವಾಗಿದೆ.

**ಶಿಷ್ಟಪರಂಪರೆ ಮತ್ತು ಜನಪದ ಪರಂಪರೆ :** ದ್ರಾವಿಡಭಾಷಾವರ್ಗಕ್ಕೆ ಸೇರುವ ತುಳು ಎಂಬ ಭಾಷೆಯು ದಕ್ಷಿಣಕನ್ನಡ ಜಿಲ್ಲೆಯ ಆಡುಭಾಷೆಯಾದ್ದರಿಂದ ಅದು 'ತುಳುನಾಡು' ಎಂಬ ಹೆಸರನ್ನು ಪಡೆದುಕೊಂಡಿದೆ. 'ಭೂತಾರಾಧನೆ' ಎಂಬುದು ತುಳುನಾಡಿನ ಪ್ರಮುಖ ಜಾನಪದೀಯ ಆಚರಣೆಗಳಲ್ಲೊಂದು. ಧರ್ಮಾಧಿಕಾರಿಗಳ ಪರಂಪರೆಗೆ ಒಲಿದು, **ಕಾಳರಾಹು, ಕಾಳರ್ಕಾಯಿ, ಕುಮಾರಸ್ವಾಮಿ, ಕನ್ಯಾಕುಮಾರಿ** ಎಂಬ, ಧರ್ಮದೇವತೆಗಳು ಎಂದು ಕರೆಯಲಾಗುವ ಶಕ್ತಿಗಳು ಧರ್ಮಸ್ಥಳದಲ್ಲಿ ನೆಲೆಗೊಂಡಿವೆ. **ಅಣ್ಣಪ್ಪ** ಎಂಬ ಹೆಸರಿನ ಭೂತಪುರುಷನು ಈ ಧರ್ಮದೇವತೆಗಳ ದೂತನಾಗಿ ಪೂಜ್ಯನಾಗಿದ್ದಾನೆ. ಅಷ್ಟುಮಾತ್ರವಲ್ಲದೆ ಅಣ್ಣಪ್ಪನು ಮಂಜುನಾಥಸ್ವಾಮಿಯ ಬಂಟನಾಗಿ ಇಡೀ ಧರ್ಮಸ್ಥಳವನ್ನೇ ಕಣ್ಣಿಟ್ಟು ಕಾಯುವ ರಕ್ಷಕದೈವವಾಗಿದ್ದಾನೆ. ಮಂಜುನಾಥಸ್ವಾಮಿಗೆ ಬ್ರಾಹ್ಮಣರು ಅರ್ಚಕರಾಗಿದ್ದು, ಆಗಮೋಕ್ತ ವಿಧಿವಿಧಾನಗಳಿಂದ ಪೂಜಾಕಾರ್ಯಗಳನ್ನು ವೇದಮಂತ್ರಗಳ ಮೂಲಕ ನೆರವೇರಿಸುತ್ತಾರೆ. ವಾರ್ಷಿಕ ರಥೋತ್ಸವಾದಿಗಳು ಶೈವಾಗಮ ಸಂಪ್ರದಾಯದಂತೆ ನಡೆಯುತ್ತವೆ. ಅಣ್ಣಪ್ಪಸ್ವಾಮಿ ಮುಂತಾದ ದೈವಗಳಿಗೆ ಕೋಲ, ನೇಮ ಎಂದು ಕರೆಯುವ ಪ್ರತ್ಯೇಕ ಆರಾಧನೆಗಳು ನೆರವೇರುತ್ತವೆ. ಆ ಹೊತ್ತಿನಲ್ಲಿ ದಲಿತವರ್ಗಕ್ಕೆ ಸೇರಿದ ಪುರುಷನು ಅಲಂಕಾರಮಯವಾದ ಭೂತವೇಷವನ್ನು ತೊಟ್ಟುಕೊಂಡು ತಾನೇ ಅಣ್ಣಪ್ಪನಾಗಿ ನರ್ತಿಸುತ್ತಾನೆ. ಅಂದಿನ


ಧರ್ಮಸ್ಥಳದ ಮಂಜುನಾಥಸ್ವಾಮಿ ದೇವಸ್ಥಾನ

ಹೊತ್ತಿನಲ್ಲಿ 'ಪಾಡ್ದನ' ಎಂದು ಕರೆಯುವ ತುಳುಭಾಷೆಯಲ್ಲಿರುವ ವಚನಸಾಹಿತ್ಯವನ್ನು ದಲಿತವರ್ಗದ ಸ್ತ್ರೀಯರು ತಾವೇ ಡೋಲು ಬಾರಿಸುತ್ತಾ ಸುಶ್ರಾವ್ಯವಾಗಿ ಹಾಡುತ್ತಾರೆ. ಹೀಗೆ ಶಿಷ್ಟ ಪರಂಪರೆ ಮತ್ತು ಜನಪದ ಪರಂಪರೆಗಳ ಆರಾಧ್ಯಮೂರ್ತಿಗಳ ಸಮನ್ವಯ, ಶಿಷ್ಟ ಮತ್ತು ಜನಪದ ಆರಾಧನಾ ಪದ್ಧತಿಗಳ ಸಮನ್ವಯ ಧರ್ಮಸ್ಥಳದಲ್ಲಿ ಯಶಸ್ವಿಯಾಗಿದೆ.

**ತ್ರಿಭಾಷಾ ಸಂಗಮ :** ವಿಶಿಷ್ಟ ಸಮಾರಂಭಗಳಲ್ಲಿ ಧರ್ಮಾಧಿಕಾರಿಗಳು ಅತ್ತ ಮಂಜುನಾಥನ ಭಕ್ತರಾಗಿ, ಇತ್ತ ದೈವಗಳ ಭಕ್ತರೂ ಆಗಿ ತಾವೇ ಪ್ರತ್ಯಕ್ಷವಾಗಿ ನಿಲ್ಲಬೇಕಾಗುತ್ತದೆ. ಅತ್ತ ದೇವಾಲಯದಲ್ಲಿ ಕನ್ನಡದಲ್ಲಿ ನುಡಿಗಳನ್ನಾಡಿದರೆ ಇತ್ತ ಭೂತಾರಾಧನೆಯಲ್ಲಿ ಭೂತಕಟ್ಟಿದವನೊಡನೆ ತುಳುಭಾಷೆಯಲ್ಲಿ ಸಂವಾದ ನಡೆಸುತ್ತಾರೆ. ದೇವತಾರ್ಚನೆಯ ಮಂತ್ರಗಳೆಲ್ಲ ಸಂಸ್ಕೃತವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹೀಗೆ ಸಂಸ್ಕೃತ, ಕನ್ನಡ, ತುಳು ಎಂಬ ತ್ರಿಭಾಷಾ ಸಂಗಮ ಸಮನ್ವಯವು ಧರ್ಮಸ್ಥಳದಲ್ಲಿ ನಡೆಯುತ್ತಿರುವುದೂ ಒಂದು ವಿಶೇಷವೇ ಸರಿ. ಆರಾಧನೆಯಲ್ಲಿ ಅತ್ತ ಬ್ರಾಹ್ಮಣರು ಅರ್ಚಕರಾದರೆ, ಇತ್ತ ಭೂತಾರಾಧನೆಯಲ್ಲಿ ದಲಿತರು. ಬ್ರಾಹ್ಮಣ–ದಲಿತ ಪ್ರಾಶಸ್ತ್ಯ ಸಮನ್ವಯ ಅಲ್ಲಿ ಸಾಧಿತವಾಗಿದೆ ಎಂದೂ ಹೇಳಿದರೂ ಅದು ಧರ್ಮಸ್ಥಳದ ವಿಷಯದಲ್ಲಿ ಸಲ್ಲುತ್ತದೆ. ಧರ್ಮದೇವತೆಗಳ ಪೈಕಿ ಕಾಳರ್ಕಾಯಿ, ಕನ್ಯಾಕುಮಾರಿಯರು ಸ್ತ್ರೀರೂಪಿಯರಾದರೆ ಕಾಳರಾಹು, ಕುಮಾರಸ್ವಾಮಿಯರು ಪುರುಷರೂಪರಾಗಿದ್ದಾರೆ. ಅಣ್ಣಪ್ಪನು ಅವರಿಗೆಲ್ಲ ದೂತನಾಗಿದ್ದಾನೆ. ಈ ಜಾನಪದೀಯ ದೈವಾರಾಧನೆಯಲ್ಲಿಯೂ ಪುರುಷದೈವ–ಸ್ತ್ರೀದೈವಗಳ ಸಮನ್ವಯವು ಸಂಘಟಿಸಿರುವುದನ್ನು ಕಾಣಬಹುದಾಗಿದೆ. ಭೂತಾರಾಧನೆಯಲ್ಲಿ ಸ್ತ್ರೀಯರ ಪಾತ್ರವೂ ಇದೆಯೆಂಬುದನ್ನು ಪ್ರತ್ಯೇಕವಾಗಿ ಗಮನಿಸಬೇಕು.

**ಪೂರ್ವಪರಂಪರೆಯ ಹಿನ್ನೆಲೆ:** ಈ ಬಗೆಯ ಸಮನ್ವಯ ಸಂಸ್ಕೃತಿಯು ಧರ್ಮಸ್ಥಳದಲ್ಲಿ ರೂಪುಗೊಂಡ ಪೂರ್ವೇತಿಹಾಸವನ್ನು ಸಂಗ್ರಹವಾಗಿಯಾದರೂ ಅವಲೋಕಿಸಬೇಕಾಗಿದೆ. ಧರ್ಮಸ್ಥಳಕ್ಕೆ ಮೊದಲು 'ಕುಡುಮ' ಎಂಬ ಹೆಸರಿತ್ತು. ಆ ಕುಡುಮದಲ್ಲಿ ತಕ್ಕಷ್ಟು ರಾಜಾಧಿಕಾರವುಳ್ಳ ಬರ್ಮಣ್ಣ ಹೆಗ್ಗಡೆ, ಅಮ್ಮುದೇವಿ ಬಲ್ಲಾಳ್ತಿಯರೆಂಬ ಪುಣ್ಯದಂಪತಿಗಳಿದ್ದರು. ಜೈನರಾದ ಅವರು ದಾನ ಶೀಲ ವ್ರತ ಉಪವಾಸಾದಿಗಳಲ್ಲಿ ಅಗ್ರಗಣ್ಯರಾಗಿದ್ದರು. ಅದಕ್ಕೆ ಬೇಕಾದ ಸಿರಿವಂತಿಕೆಯೂ ಅವರಿಗಿತ್ತು. ನೆಲ್ಯಾಡಿಬೀಡು ಎಂಬ ಭವನದಲ್ಲಿ ಅವರು ವಾಸವಾಗಿದ್ದರು. ಬೀಡಿಗೆ ಸನಿಹದಲ್ಲಿಯೇ ಮನೆದೇವರಾದ ಚಂದ್ರನಾಥ ತೀರ್ಥಂಕರನ ಚೈತ್ಯಾಲಯವಿತ್ತು. ದೈವಗಳಿಗೂ ಅವರು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು.

ಒಂದು ದಿನ 'ಧರ್ಮದೇವತೆಗಳು' ಮನುಷ್ಯ ರೂಪವನ್ನು ಧರಿಸಿ, ಆನೆ ಕುದುರೆಗಳನ್ನೇರಿ, ಪರಿವಾರ ಸಹಿತರಾಗಿ ನೆಲ್ಯಾಡಿಬೀಡಿನ ಮುಂದೆ ಇಳಿದರು. ಅವರನ್ನು ಕಂಡು ಬೆರಗಾದ ಹೆಗ್ಗಡೆ ದಂಪತಿಗಳು ಆ ಅಪೂರ್ವ ಅತಿಥಿಗಳನ್ನು ಪ್ರೀತ್ಯಾದರಗಳಿಂದ ಸತ್ಕರಿಸಿದರು. ಅದಕ್ಕೆ ಮೆಚ್ಚಿದ ಧರ್ಮದೇವತೆಗಳು ತಾವು ಆ ಬೀಡಿನಲ್ಲಿ ನೆಲೆಸಿದ್ದೇವೆಂಬುದರ ಕುರುಹಾಗಿ ಎರಡು ಖಡ್ಗಗಳನ್ನು ಅಲ್ಲಿಯೇ ಬಿಟ್ಟು ಅಂತರ್ಧಾನರಾಗಿ ಬಿಟ್ಟರು. ಅಂದು ರಾತ್ರಿ ಹೆಗ್ಗಡೆಯವರ ಕನಸಿನಲ್ಲಿ ಕಾಣಿಸಿಕೊಂಡು, "ನಮ್ಮನ್ನು ಆರಾಧಿಸಿಕೊಂಡಿರಿ, ನಿಮ್ಮ ಧರ್ಮಕಾರ್ಯಗಳು ಒಂದಕ್ಕೆ ಹತ್ತಾಗಿ ನಡೆಯುವಂತೆ ನಾವು ನೋಡಿಕೊಳ್ಳುತ್ತೇವೆ. ಸಂಪತ್ತನ್ನು ಸಂಗ್ರಹಿಸಿಕೊಂಡು ನಮ್ಮ ದೂತನಾದ ಅಣ್ಣಪ್ಪನೂ ನಿಮ್ಮೊಡನೆ ಇರುತ್ತಾನೆ" ಎಂದು ಧರ್ಮದೇವತೆಗಳು ಆಜ್ಞಾಪಿಸಿದರು. ಅದರಂತೆ ಹೆಗ್ಗಡೆಯವರು ನೆಲ್ಯಾಡಿಬೀಡನ್ನು ಧರ್ಮದೇವತೆಗಳಿಗೆ ಬಿಟ್ಟುಕೊಟ್ಟು, ತಾವು ಬೇರೊಂದು ನಿವಾಸವನ್ನು ರೂಪಿಸಿಕೊಂಡರು. ಧರ್ಮಕಾರ್ಯ ಪ್ರವರ್ತನೆಗಾಗಿ ಹೆಗ್ಗಡೆಯವರಿಗೆ 'ಧರ್ಮಾಧಿಕಾರಿ' ಎಂಬ ಪಟ್ಟವಾಯಿತು.

**ದೇವಾರಾಧನೆಯೂ ಪ್ರಾರಂಭವಾಗಬೇಕು :** ಬ್ರಾಹ್ಮಣರೇ ಆದಿಯಾಗಿ ಈ ಕ್ಷೇತ್ರದಲ್ಲಿ ಭೋಜನಾದಿಗಳನ್ನು ಸ್ವೀಕರಿಸಬೇಕಾದರೆ ದೈವರಾಧನೆಯ ಜೊತೆಗೆ ದೇವಾರಾಧನೆಯೂ ನೆರವೇರಬೇಕು ಎಂದು ಹಿರಿಯರು ಹೆಗ್ಗಡೆಯವರಿಗೆ ಹೇಳಿದರು. ಆ ಕಾಲಕ್ಕೆ ಕಾಶಿಯಿಂದ ತರಲಾಗಿದ್ದ ಲಿಂಗವೊಂದು ಮಂಗಳೂರು ಪಟ್ಟಣದ ಕದ್ರಿ ಗುಡ್ಡವೆಂಬ ಪುಣ್ಯಕ್ಷೇತ್ರದ ಕೊಳವೊಂದರಲ್ಲಿ 'ಮಂಜುನಾಥ' ನೆಂಬ ಹೆಸರಿನಿಂದ ನಿಕ್ಷೇಪಗೊಂಡಿತ್ತು. ಧರ್ಮದೇವತೆಗಳ ಸೂಚನೆಯಂತೆ ಅಣ್ಣಪ್ಪನು ಕದ್ರಿಯಿಂದ ಆ ಲಿಂಗವನ್ನು ಎತ್ತಿ ತಂದು, ಈಗ ಧರ್ಮಸ್ಥಳದಲ್ಲಿ ಮಂಜುನಾಥನ ಗುಡಿಯಿರುವಲ್ಲಿಯೇ ನೆಲೆಗೊಳಿಸಿದನು. ಬ್ರಾಹ್ಮಣರೇ ಅದಕ್ಕೆ ಅರ್ಚಕರಾದರು.

ಆ ಧರ್ಮಾಧಿಕಾರಿಗಳ ಪರಂಪರೆಯಲ್ಲಿ, ಮುಂದೆ ದೇವರಾಜ ಹೆಗ್ಗಡೆಯವರು (೧೫೦೩) ಪಟ್ಟಕ್ಕೆ ಬಂದಾಗ, ಮಾಧ್ವಯತಿಗಳಾದ ವಾದಿರಾಜ ಗುರುವರ್ಯರು ಕುಡುಮಕ್ಕೆ ಆಗಮಿಸಿದರು. "ನಾನು ಇಲ್ಲಿ ಭಿಕ್ಷೆ ಸ್ವೀಕರಿಸಬೇಕಾದರೆ ಮಂಜುನಾಥಲಿಂಗವನ್ನು ಆಗಮೋಕ್ತವಾಗಿ ಪುನಃಪ್ರತಿಷ್ಠಾಪನೆ ಮಾಡಬೇಕು" ಎಂದು ಆಜ್ಞಾಪಿಸಿದರು. ಅವರ ಮಾರ್ಗದರ್ಶನದಲ್ಲಿಯೇ ಆ ಮಹತ್ಕಾರ್ಯವು ಅಭೂತಪೂರ್ವವಾಗಿ ನೆರವೇರಿತು. ಅಂದಿನ ದಾನಧರ್ಮಗಳನ್ನೂ ಅನ್ನಬ್ರಹ್ಮನ ಆರಾಧನೆಯನ್ನೂ ಕಂಡು ಮೆಚ್ಚಿದ ವಾದಿರಾಜರು, 'ಇದು ಧರ್ಮಸ್ಥಳವೇ ಸರಿ' ಎಂದು ಕೊಂಡಾಡಿ, 'ಕುಡುಮ' ಎಂಬ ಹೆಸರನ್ನು ಹಿಂದಕ್ಕಿರಿಸಿ, 'ಧರ್ಮಸ್ಥಳ' ಎಂದೇ ನಾಮಕರಣ ಮಾಡಿಬಿಟ್ಟರು. ಶೈವಪಂಥದ ಕ್ಷೇತ್ರವೊಂದು ಮಾಧ್ವ ಪಂಥದ ಯತಿಯೊಬ್ಬರಿಂದ ಪುನಃಪ್ರತಿಷ್ಠಾಪನೆಗೊಂಡು 'ಧರ್ಮಸ್ಥಳ' ವೆಂಬ ಹೆಸರನ್ನು ಪಡೆದು, ಜೈನರಾದ ಧರ್ಮಾಧಿಕಾರಿಗಳ ಆಡಳಿತಕ್ಕೆ ಒಳಪಟ್ಟಿರುವುದು ಕೂಡ ಇಲ್ಲಿನ ಸಮನ್ವಯ ತತ್ವವನ್ನು ಎತ್ತಿ ತೋರಿಸುತ್ತದೆ.

**ರಾಜರ್ಷಿ ವೀರೇಂದ್ರ ಹೆಗ್ಗಡೆಯವರು :** ಪ್ರಸ್ತುತ, ಧರ್ಮಸ್ಥಳದಲ್ಲಿ 'ರಾಜರ್ಷಿ'ಎಂಬ ಬಿರುದಾಂಕಿತರಾದ ವೀರೇಂದ್ರ ಹೆಗ್ಗಡೆಯವರು 'ಧರ್ಮಾಧಿಕಾರಿ' ಪಟ್ಟವನ್ನು ಅಲಂಕರಿಸಿದ್ದಾರೆ. ಅವರದು



ಧರ್ಮಸ್ಥಳದ ಗೊಮ್ಮಟೇಶ್ವರ ಸ್ವಾಮಿ

ಪವಿತ್ರವಾದ ಪೀಠ, ದೀಕ್ಷಾಬದ್ಧ ಜೀವನ. ಮಂಜುನಾಥ ದೇವರು ಮತ್ತು ಧರ್ಮಾಧಿಕಾರಿಗಳ ನಡುವೆ ಅಭೇದ ಕಲ್ಪನೆ ಮೂಡಿಕೊಂಡು ಬಂದಿದೆ. ಮಂಜುನಾಥನದು ಕುಳಿತ ಪಟ್ಟವಾದರೆ ಧರ್ಮಾಧಿಕಾರಿಗಳದು ನಡೆದಾಡುವ ಪಟ್ಟ. ಇವರು ಮಾತನಾಡುವ ಮಂಜುನಾಥಮೂರ್ತಿ. ಈ ಹಿನ್ನೆಲೆಯಲ್ಲಿಯಾದರೋ ದೇವ–ಮಾನವ ಸಮನ್ವಯವೇ ಸಂಘಟಿಸಿದೆಯೆಂದು ಭಾವಿಸಿದರೆ ಇನ್ನೂ ಸಂಭ್ರಮವು ಉಕ್ಕುತ್ತದೆ.

ನಿತ್ಯ ಅನ್ನದಾನ ಧರ್ಮಸ್ಥಳದ ವೈಶಿಷ್ಟ್ಯಗಳಲ್ಲೊಂದು. ಜಾತಿಭೇದವಿಲ್ಲದೆ, ಧರ್ಮಭೇದವಿಲ್ಲದೆ ಎಲ್ಲರೂ ಅದರಲ್ಲಿ ಪಾಲ್ಗೊಳ್ಳುತ್ತಾರೆ. ಮೇಲ್ವರ್ಗದವರಿಗಾಗಲಿ, ಶ್ರೀಸಾಮಾನ್ಯರಿಗಾಗಲಿ ಮಂಜುನಾಥಸ್ವಾಮಿಯು ಅತ್ಯಂತ ಪ್ರಿಯನಾಗಿದ್ದಾನೆ. ಶ್ರೀಸಾಮಾನ್ಯರಿಗಾದರೋ ಆ ಸ್ವಾಮಿಯ ಸನ್ನಿಧಿಯಲ್ಲಿ ಮುಡಿಯೊಪ್ಪಿಸಿದರೇ ಸಮಾಧಾನ. ಶಿಷ್ಟರನ್ನೂ ಶ್ರೀಸಾಮಾನ್ಯರನ್ನೂ ಸಮಾನಪ್ರೇಮದಿಂದ ಕಾಣುವ ಪ್ರೇಮಸಮನ್ವಯ ಕ್ಷೇತ್ರ ಈ ಧರ್ಮಸ್ಥಳ ಎಂದು ಹೇಳಿದರೂ ಒಪ್ಪುತ್ತದೆ.

**'ಹೊಯ್ಲು'** ಎಂದು ಕರೆಯುವ ನ್ಯಾಯತೀರ್ಮಾನ ಪದ್ಧತಿಯೊಂದು ಧರ್ಮಸ್ಥಳದಲ್ಲಿ ಆಚರಣೆಯಲ್ಲಿದೆ. ಧರ್ಮಾಧಿಕಾರಿಗಳೇ ನ್ಯಾಯಮೂರ್ತಿಗಳಾಗಿ ನ್ಯಾಯದಾನ ಮಾಡುತ್ತಾರೆ. ಅದರಲ್ಲಿ ಜಾತಿಧರ್ಮಗಳ ಭೇದವಿಲ್ಲದೆ ಯಾರು ಬೇಕಾದರೂ ಪಾಲ್ಗೊಂಡು ಉಪಯೋಗ ಪಡೆಯಬಹುದು.

ಗ್ರಾಮಾಭಿವೃದ್ಧಿಯ ಕ್ಷೇತ್ರದಲ್ಲಿ ವೀರೇಂದ್ರ ಹೆಗ್ಗಡೆಯವರು ಬೆಳ್ತಂಗಡಿ ತಾಲ್ಲೂಕಿನಲ್ಲಿ, ಇಡೀ ರಾಷ್ಟ್ರಕ್ಕೆ ಮಾದರಿಯಾಗಬಲ್ಲ ಸಮಾಜ ಸೇವಾಕಾರ್ಯಗಳನ್ನು ನೆರವೇರಿಸಿ ಜಯಶೀಲರಾಗಿದ್ದಾರೆ. ಇದಲ್ಲದೆ, ಕರ್ನಾಟಕದಾದ್ಯಂತ ಬೃಹತ್ ಶೈಕ್ಷಣಿಕ ಕೇಂದ್ರಗಳನ್ನು ಅತ್ಯಂತ ಉತ್ತಮವಾದ ರೀತಿಯಲ್ಲಿ ನಡೆಸಿಕೊಂಡು ಬರುತ್ತಿರುವುದು ಕೂಡ ಧರ್ಮಾಧಿಕಾರಿಗಳ ಹೆಗ್ಗಳಿಕೆಯಾಗಿದೆ.

ಶಾಲಾಕಾಲೇಜುಗಳಿಂದ ಹಿಡಿದು, ಆಯುರ್ವೇದ, ಸಂಸ್ಕೃತ, ವೈದ್ಯಕೀಯ ಕಾಲೇಜು, ಪ್ರಕೃತಿ ಚಿಕಿತ್ಸಾಲಯಗಳವರೆಗೆ ಇವುಗಳ ವ್ಯಾಪ್ತಿಯನ್ನು ಕಾಣಬಹುದು. ಹಿಂದೂ ಕ್ರೈಸ್ತ ಮುಸಲ್ಮಾನ ಎಂಬ ಎಲ್ಲ ಧರ್ಮದವರೂ ವೀರೇಂದ್ರ ಹೆಗ್ಗಡೆಯವರ ಹತ್ತು ಹಲವು ಯೋಜನೆಗಳಿಂದ ಗೌರವಪೂರ್ಣವಾದ ಬದುಕನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದರಿಂದ ಧರ್ಮಸ್ಥಳವು ಧರ್ಮ ಸಮನ್ವಯಕ್ಕೆ ಹೆಸರುವಾಸಿಯಾಗಿರುವಂತೆಯೇ ಸೇವಾ ಕಾರ್ಯ–ಶೈಕ್ಷಣಿಕ ಕಾರ್ಯಗಳ ಅನುಪಮ ಸಮನ್ವಯಕ್ಕೂ ಜಗದ್ವಿಖ್ಯಾತಿಯಾಗಿದೆ.

**ಲಕ್ಷದೀಪೋತ್ಸವ: ಧರ್ಮಸಮನ್ವಯ ದೀಪೋತ್ಸವ:** ಲಕ್ಷದೀಪೋತ್ಸವವೆಂಬುದು ಧರ್ಮಸ್ಥಳದ ಅತ್ಯಂತ ನಯನಾಭಿರಾಮವಾದ ಪರ್ವ. ಅದು ಐದು ದಿನಗಳ ಮಹೋತ್ಸವ. ನಾಲ್ಕನೆಯ ದಿನದಂದು 'ಸರ್ವಧರ್ಮಸಮ್ಮೇಳನ' ಜರುಗುತ್ತದೆ. ಹಿಂದೂ, ಜೈನ, ಕ್ರೈಸ್ತ, ಮುಸಲ್ಮಾನ ಮುಂತಾದ ವಿವಿಧ ಧರ್ಮಗಳ ವಿದ್ವಾಂಸರು, ಸಂತರು ಅದರಲ್ಲಿ ಭಾಗವಹಿಸಿ ಆಯಾ ಧರ್ಮಗಳ ಗುಣವಿಶೇಷಗಳನ್ನು ಬಿತ್ತರಿಸುತ್ತಾರೆ. ಕೊನೆಯಲ್ಲಿ ಧರ್ಮಾಧಿಕಾರಿಗಳು ಸರ್ವಧರ್ಮಸಮನ್ವಯ ಮಂತ್ರವನ್ನೇ ಗಟ್ಟಿಗೊಳಿಸುತ್ತಾರೆ. ಹೀಗೆ ನಾನಾಮುಖಗಳಲ್ಲಿ ಧರ್ಮಸ್ಥಳವು ಸರ್ವಧರ್ಮಸಮನ್ವಯದ ದಿವ್ಯಭೂಮಿಯಾಗಿದೆ.

ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು ಬೋಧಿಸಿದ ಸರ್ವಧರ್ಮಸಮನ್ವಯ, ದಲಿತೋದ್ಧಾರದ ಬೋಧನೆಗಳು ಧರ್ಮಸ್ಥಳದಲ್ಲಿ ಸಾಕ್ಷಾತ್ಕಾರಗೊಳ್ಳುತ್ತಿವೆಯೆಂದರೆ ಯಾರು ತಾನೆ ಹೆಮ್ಮೆಪಡುವುದಿಲ್ಲ. !